# ಕಮಲ ಪಥ

RNI No.:KARKAN/2023/84034 | ಸಂಪುಟ : 01 | ಸಂಚಿಕೆ : 10 | ಜನವರಿ 2024 | ಬೆಂಗಳೂರು | ₹ 10/-

ನನಸಾದ ಕನಸು

ಮಂದಿರವಲ್ಲೇ ಕಟ್ಟಿದೆವು

## ರಾಮ ಮಂದಿರ





ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಪದಾಧಿಕಾರಿಗಳ ಸಭೆ



ಮಾಜಿ ಪ್ರಧಾನಿ ದಿ. ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದಂದು ಗಣ್ಯರಿಂದ ಪುಷ್ಪ ನಮನ



ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಂದ ಪಂ. ಮದನ್ ಮೋಹನ್ ಮಾಳವೀಯ ಅವರ 162 ನೇ ಜನ್ಮದಿನದಂದು ಅವರ ಕೃತಿ ಸಂಗ್ರಹಗಳ ಲೋಕಾರ್ಪಣೆ



ನವದೆಹಲಿಯ ಭಾರತ್ ಮಂಟಪದಲ್ಲಿ ಆಯೋಜಿಸಿದ್ದ 'ವೀರ್ ಬಾಲ್ ದಿವಸ್' ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ




ವಾರಣಾಸಿಯಲ್ಲಿ ಆಯೋಜಿಸಿದ್ದ 'ವಿಕಸಿತ ಭಾರತ ಪ್ರದರ್ಶಿನಿ'ಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ



ನವ ದೆಹಲಿಯ ನೆಹರೂ ನಗರ ಪ್ರತಾಪ್ ಕ್ಯಾಂಪ್‌ನಲ್ಲಿ ಆಯೋಜಿಸಿದ್ದ 'ವಿಕಸಿತ ಭಾರತ ಸಂಕಲ್ಪ ಯಾತ್ರೆ'ಯಲ್ಲಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ



ಭಾರತ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳಾದ ಲಕ್ಷದ್ವೀಪದ ಕವರಟ್ಟಿ ಜನಾಂಗದೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ

## ಸಂಪಾದಕೀಯ

# ಧನ್ಯೋಽಸ್ಮಿ

**ಅ**ಯೋಧ್ಯೆಯಲ್ಲಿ ಶ್ರೀ ರಾಮಮಂದಿರ ಲೋಕಾರ್ಪಣೆಯಾಗುತ್ತಿದೆ. ಅಂದು **'ಮಂದಿರವಲ್ಲೇ ಕಟ್ಟುವೆವು'** ಶಪಥ ಮಾಡಿದ್ದು ನಾವೇ. ಇಂದು **'ಮಂದಿರವಲ್ಲೇ ಕಟ್ಟಿದ್ದೇವೆ'** ಎಂದು ಹೆಮ್ಮೆಯಿಂದ ಎದೆ ತಟ್ಟಿ ಹೇಳಿಕೊಳ್ಳುವಂತಹ ಕ್ಷಣಕ್ಕೆ ಸಾಕ್ಷಿಯಾಗುತ್ತಿರುವುದೂ ನಾವೇ. ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವ ಕಾರ್ಯಕರ್ತರುಗಳಿಗೆ ಇದಕ್ಕಿಂತ ಮಧುರವಾದ ಕ್ಷಣಗಳು ಸಿಗಲಾರವು. ಅಂದು ಜೀವದ ಹಂಗು ತೊರೆದು ಹೋರಾಡಿ, ಶ್ರೀ ರಾಮಮಂದಿರದ ಕನಸು ಕಂಡಿದ್ದ ಕಾರ್ಯಕರ್ತರುಗಳಿಗೆ, ಭರವಸೆ ಇಟ್ಟು ಬೆನ್ನಿಗೆ ನಿಂತ ಕೋಟ್ಯಾಂತರ ಶ್ರೀರಾಮ ಭಕ್ತರಿಗೆ ಇದೊಂದು ಅತ್ಯಂತ ಭಾವನಾತ್ಮಕವಾದ ಸಂತಸದ ಕ್ಷಣ. ಸಾಕ್ಷಾತ್ಕಾರವಾದ ಈ ಸಂತಸದ ಕ್ಷಣದ ಹಿಂದೆ 50 ದಶಕಗಳ ಹೋರಾಟದಲ್ಲಿ ಜೀವ ಕಳೆದುಕೊಂಡವರ ತ್ಯಾಗ ಬಲಿದಾನವಿದೆ. ಹಿಂಜರಿಯದೆ ಹೋರಾಟದಲ್ಲಿ ಭಾಗಿಯಾಗಿ ಇತಿಹಾಸದ ಕಪ್ಪುಚುಕ್ಕೆಯೊಂದನ್ನು ಅಳಿಸಿ ಹಾಕಿ, ಶ್ರೀ ರಾಮಮಂದಿರ ನಿರ್ಮಾಣಕ್ಕೆ ಓಂಕಾರ ಬರೆದ ಕರಸೇವಕರ ಪರಿಶ್ರಮವಿದೆ. ದೇವಾಲಯಗಳಲ್ಲಿ ಮಾತ್ರ ಮೊಳಗುತ್ತಿದ್ದ 'ಜೈ ಶ್ರೀರಾಮ್' ಘೋಷಣೆಯನ್ನು ಪ್ರತೀ ಮನೆಯನ್ನೂ, ಪ್ರತೀ ಮನವನ್ನೂ ಆವರಿಸಿಕೊಳ್ಳುವಂತೆ ಮಾಡಿದ ಪರಿವಾರದ ಎಲ್ಲಾ ಹಿರಿಯರ ಹಾಗೂ ಅಯೋಧ್ಯಾ ರಥಯಾತ್ರೆಯ ಮೂಲಕ ಶ್ರೀ ರಾಮಮಂದಿರ ಹೋರಾಟಕ್ಕೆ ಹೊಸದೊಂದು ದಿಕ್ಕನ್ನು ತೋರಿಸಿಕೊಟ್ಟು, ಸಂಘಟನೆಗೂ ಶಕ್ತಿ ತುಂಬಿದ ಶ್ರೀ ಅಡ್ವಾಣಿಯವರ ನೇತೃತ್ವದ ಕರ್ತೃತ್ವವಿದೆ. ಇದಲ್ಲದಕ್ಕಿಂತ ಮಿಗಿಲಾಗಿ ಇದ್ದ ಅಡ್ಡಿ ಆತಂಕಗಳೆಲ್ಲವನ್ನೂ ಕಾನೂನು ಚೌಕಟ್ಟಿನಲ್ಲಿಯೇ ಬಗೆಹರಿಸಿ, ಭವ್ಯವಾದ ಶ್ರೀ ರಾಮಂದಿರದ ನಿರ್ಮಾಣಕ್ಕೆ ಬೆನ್ನೆಲುಬಾಗಿ ನಿಂತ ಪ್ರಧಾನಿ ಶ್ರೀ ನರೇಂದ್ರಮೋದಿ ಹಾಗೂ **'ನ ಭೋತೋ ನ ಭವಿಷ್ಯತಿ'** ಎಂಬ ರೀತಿಯಲ್ಲಿ ಲೋಕಾರ್ಪಣೆ ಮಾಡಲು ಅಯೋಧ್ಯೆಯನ್ನು ಸಜ್ಜುಗೊಳಿಸುತ್ತಿರುವ ಉತ್ತರಪ್ರದೇಶದ ಮುಖ್ಯಮಂತ್ರಿ ಶ್ರೀ ಯೋಗಿ ಆದಿತ್ಯನಾಥ್‌ರವರ ಇಚ್ಛಾಶಕ್ತಿಯಿದೆ. ಇವರೆಲ್ಲರ ಬಗ್ಗೆಯೂ ಈ ಸುಸಂದರ್ಭದಲ್ಲಿ ಹೃದಯದಾಳದಿಂದ ಹೇಳಬಹುದಾದ ಒಂದೇ ಪದ 'ಧನ್ಯೋಽಸ್ಮಿ'.

ಇಂತಹ ಸಂತಸದ ಕ್ಷಣವನ್ನು ಜೀರ್ಣಿಸಿಕೊಳ್ಳದ ಕುತ್ಸಿತ ಮನಸ್ಸುಗಳಿವೆ. ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಕೊಟ್ಟ ಆಹ್ವಾನವನ್ನು ತಿರಸ್ಕರಿಸಿದ, ಇತಿಹಾಸದಿಂದ ಪಾಠ ಕಲಿಯದ ರಾಜಕೀಯ ನೇತಾರ(?)ರಿದ್ದಾರೆ. ಗೋಧ್ರಾ ನಂತರದ ಘಟನೆಗಳನ್ನು ಮರೆತು ಹೋಗಿರುವ ಕೆಲವು ನಾಯಕರು ಗೋಧ್ರಾ, ಗಲಭೆ ಪುನರಾವರ್ತನೆಯಾಗುತ್ತದೆ ಎಂದು ಹತಾಶೆಯಿಂದ ಬೊಗಳುತ್ತಿದ್ದಾರೆ. ಶ್ರೀರಾಮ ಮಂದಿರ ನಿರ್ಮಾಣವನ್ನು ಸಾಕಾರಗೊಳಿಸಿದ ಶ್ರೀ ರಾಮನ ಸಂತತಿ ಇದ್ದ ಹಾಗೆ, ಇಂತಹ ರಾವಣರ ಸಂತತಿಯೂ ಇದ್ದೇ ಇರುತ್ತದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಮತ್ತೊಂದಿಲ್ಲ. 30 ವರ್ಷಗಳ ಹಿಂದಿನ ಕರಸೇವಕರ ಮೇಲಿನ ಕೇಸುಗಳಿಗೆ ಮರು ಜೀವ ತುಂಬಿ ಕರಸೇವಕರನ್ನು ಬಂಧಿಸುವಂತಹ ಹೀನಕೃತ್ಯಕ್ಕೆ ಇಳಿದಿರುವುದು, ಕಾಂಗ್ರೆಸ್ ನಾಯಕರ ಹತಾಶೆಯ ಮನಃಸ್ಥಿತಿಯಲ್ಲದೆ ಬೇರೇನೂ ಅಲ್ಲ. ಇಡೀ ದೇಶವೇ ಶ್ರೀರಾಮನ ಜಪ ಮಾಡುತ್ತಾ, ಅವನ ಹಿಂದೆ ಹೋಗುತ್ತಿರುವಾಗ ಕಾಂಗ್ರೆಸ್ ನಾಯಕರು ರಾವಣನ ಜಾಡು ಹಿಡಿದು ಹೊರಟಿರುವುದು ಅದರ ಹಳೇ ಚಾಳಿ ಮತ್ತು ಅವನತಿಯತ್ತ ಇಟ್ಟ ಮತ್ತೊಂದು ಹೆಜ್ಜೆ.

ಗ್ಯಾರಂಟಿಗಳ ಅಲೆಯಲ್ಲಿ ಅಧಿಕಾರ ಹಿಡಿದ ಕಾಂಗ್ರೆಸ್‌ಗೆ ವಾಸ್ತವ ಅರಿವಾಗುತ್ತಿದೆ. ಮುಂಬರುವ ಲೋಕಸಭಾ ಚುನಾವಣೆಯು ತಾವಂದು ಕೊಂಡಷ್ಟು ಸಲೀಸಲ್ಲ ಎಂದು ಕಾಂಗ್ರೆಸ್ ನಾಯಕರಿಗೆ ಮನವರಿಕೆಯಾಗುತ್ತಿದೆ. ಲೋಕಸಭಾ ಅಭ್ಯರ್ಥಿಗಳಾಗಲು ಮಂತ್ರಿಗಳೇ ಹಿಂದೇಟು ಹಾಕುತ್ತಿರುವುದೇ ಇದಕ್ಕೆ ಸ್ಪಷ್ಟ ಸಾಕ್ಷಿ. ಅತ್ತ ಕಾಂಗ್ರೆಸ್‌ನಲ್ಲಿ ಅಭ್ಯರ್ಥಿಗಳಾಗಲು ಹಿಂದೇಟು ಹಾಕುತ್ತಿದ್ದರೆ, ಬಿಜೆಪಿಯಲ್ಲಿ ಎಲ್ಲಿಲ್ಲದ ಉತ್ಸಾಹ ಸಕಾರಾತ್ಮಕವಾದ ವಾತಾವರಣವನ್ನು ಸೃಷ್ಟಿಯಾಗಿದೆ. ಇದರ ಜೊತೆಗೆ ಸಂಘಟನೆಯನ್ನು ಸಶಕ್ತಗೊಳಿಸಲು ಹಾಗೂ ಲೋಕಸಭಾ ಚುನಾವಣೆಗೆ ಸಜ್ಜುಗೊಳಿಸಲು ನೂತನ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ನಿರಂತರ ಸಭೆಗಳು ಆಯೋಜಿತವಾಗುತ್ತಿವೆ. ಆಯೋಜಿತವಾದ ಕ್ಲಸ್ಟರ್ ಮಟ್ಟದ ಸಿದ್ಧತಾ ಸಭೆಗಳಲ್ಲಿ 28 ಲೋಕಸಭಾ ಕ್ಷೇತ್ರಗಳನ್ನೂ ಗೆಲ್ಲಲು ಅಗತ್ಯವಾದ ತಂತ್ರಗಳ ಬಗ್ಗೆ ಚರ್ಚೆಯಾಗುತ್ತಿದೆ. ನೂತನ ರಾಜ್ಯಾಧ್ಯಕ್ಷರ ಆಯ್ಕೆಯ ನಂತರ ಮೋರ್ಚಾಗಳ ಪದಾಧಿಕಾರಿಗಳ ಹಾಗೂ ಜಿಲ್ಲಾಧ್ಯಕ್ಷರುಗಳ ಆಯ್ಕೆ ಪ್ರಕ್ರಿಯೆಯೂ ವೇಗ ಪಡೆದುಕೊಂಡಿದೆ.

ಸಮರ್ಥ ನೇತೃತ್ವವಿದೆ, ಪೂರಕ ವಾತಾವರಣವಿದೆ. ಅತ್ಯಂತ ಮಹತ್ವದ್ದೆನಿಸಿರುವ 2024ರ ಚುನಾವಣೆಯಲ್ಲಿ ಪ್ರತೀ ಕಾರ್ಯಕತನೂ ಸರ್ವ ರೀತಿಯಲ್ಲಿ ಸಕ್ರಿಯನಾಗಿ ಅಯೋಧ್ಯೆ ಅಲೆ, ಮೋದಿ ಅಲೆಯನ್ನು ಮತಗಳಾಗಿ ಪರಿವರ್ತಿಸುವ ಹೊಣೆಗಾರಿಕೆಯತ್ತ ಶ್ರಮಿಸಬೇಕಿದೆ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಶ್ರೀ ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಶ್ರೀ ಬಿದರೆ ಪ್ರಕಾಶ್
ಮೊ : 9513447961

## ಸುಭಾಷಿತ



**ಒಬ್ಬ ಶ್ರೇಷ್ಠ ವ್ಯಕ್ತಿ ಒಬ್ಬ ಮುತ್ಸದ್ಧಿಗಿಂತಲೂ ದೊಡ್ಡವನು. ಏಕೆಂದರೆ ಶ್ರೇಷ್ಠ ವ್ಯಕ್ತಿ ಸಮಾಜದ ಸೇವಕನಾಗಿರಲೂ ಸಿದ್ಧನಾಗಿರುತ್ತಾನೆ.**

**– ಡಾ. ಬಿ.ಆರ್. ಅಂಬೇಡ್ಕರ್**



**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005

## ಈ ಸಂಚಿಕೆಯಲ್ಲಿ



08 **ಪರಿವರ್ತನೆಯ ಪಥ ರಾಮ ಮಂದಿರ ರಥ**



21 **ಎಡಬಿಡದ ಕಾರ್ಯಕ್ರಮಗಳು, ಸಜ್ಜುಗೊಳ್ಳುತ್ತಿರುವ ಸಂಘಟನೆ**

- **ದೀವಟಿಗೆ :** ಸ್ವಾತಂತ್ರ್ಯ ಹೋರಾಟದ ಧೀಮಂತ – ಲಾಲ ಲಜಪತ್ ರಾಯ್ ..... 05
- ಬಿಜೆಪಿ ಕಾರ್ಯಕರ್ತರೆಂದರೆ ಇವರೇ .....06
- ಶ್ರೀರಾಮ ಮಂದಿರ ಲೋಕಾರ್ಪಣೆ.....07
- ರಾಷ್ಟ್ರೀಯ ಅಸ್ಮಿತೆಯ ಪುತ್ಥಳಿ ಹೆಮ್ಮೆಯಿಂದ ಎದ್ದು ನಿಲ್ಲುತ್ತಿದೆ .....10
- ಹೋರಾಟ, ಭಾವನೆಯದ್ದೇ ನೇತೃತ್ವ .....13
- ಸೋಲನ್ನು ಸವಾಲಾಗಿ ಸ್ವೀಕರಿಸದ ಕಾಂಗ್ರೆಸ್ .....17
- ಬ್ರಿಟಿಷರ ಕಾಲದ ಕಾನೂನಿಗೆ ವಿದಾಯ .....20
- ಹಿರಿಯ ಕಾರ್ಯಕರ್ತರ ಪರಿಚಯಮಾಲೆ : ಡಾ. ಎಸ್.ವಿ. ಜಠಾರ .....33
- **ಮನ್ ಕಿ ಬಾತ್** – ಭಾರತ ಆತ್ಮಸ್ಥೈರ್ಯದ ಪ್ರತೀಕ ..... 34

ಹರೀಶ್ ಆತ್ರೇಯ
ಬಿಜೆಪಿ ಕಾರ್ಯಕರ್ತರು

ಧೀಮಂತಿಗೆ



## ಸ್ವಾತಂತ್ರ್ಯ ಹೋರಾಟದ ಧೀಮಂತ

# ಲಾಲಾ ಲಜಪತ್ ರಾಯ್

**(ಜನವರಿ 28, 1865 – ನವೆಂಬರ್ 17, 1928)**

ಭಾರತದ ಸ್ವಾತಂತ್ರ್ಯ ಹೋರಾಟದ ಧೀಮಂತರಲ್ಲಿ ಒಬ್ಬರಾದ ಲಾಲಾ ಲಜಪತ್ ರಾಯ್ ಅವರು ಬಹುಮುಖಿ ನಾಯಕರಾಗಿದ್ದರು. ಅವರ ಸಿದ್ಧಾಂತಗಳು ಮತ್ತು ಕೊಡುಗೆಗಳು ರಾಷ್ಟ್ರದ ಇತಿಹಾಸದಲ್ಲಿ ಅಳಿಸಲಾಗದ ಛಾಪು ಮೂಡಿಸಿವೆ. ಅವರ ಹಿಂದೂ-ಪರ ದೃಷ್ಟಿಕೋನಗಳು ಅವರ ನಂಬಿಕೆಗಳ ಮಹತ್ವದ ಅಂಶವಾಗಿದ್ದು, ಭಾರತದ ಸ್ವಾತಂತ್ರ್ಯದ ಅನ್ವೇಷಣೆಯಲ್ಲಿ ನಿರ್ಣಾಯಕ ಅವಧಿಯಲ್ಲಿ ಅವರ ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಯ ಮೇಲೆ ಪ್ರಭಾವ ಬೀರಿತು.

ಜನವರಿ 28, 1865 ರಂದು ಪಂಜಾಬ್‌ನಲ್ಲಿ ಜನಿಸಿದ ಲಾಲಾ ಲಜಪತ್ ರಾಯ್, ಭಾರತದ ರಾಷ್ಟ್ರೀಯತಾವಾದಿ ಚಳವಳಿಯಲ್ಲಿ ಪ್ರಮುಖ ವ್ಯಕ್ತಿಯಾಗಿ ಹೊರಹೊಮ್ಮಿದರು. ಅವರು ಹಿಂದೂ ಸಂಸ್ಕೃತಿ, ಸಂಪ್ರದಾಯಗಳು ಮತ್ತು ಮೌಲ್ಯಗಳ ಸಂರಕ್ಷಣೆ ಮತ್ತು ಪ್ರಚಾರಕ್ಕಾಗಿ ತೀವ್ರವಾಗಿ ಪ್ರತಿಪಾದಿಸಿದರು, ದೇಶದ ಗುರುತನ್ನು ರೂಪಿಸುವಲ್ಲಿ ಅವುಗಳ ಆಂತರಿಕ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದಾರೆ.

ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಪುನರುಜ್ಜೀವನಗೊಳಿಸುವ ಮತ್ತು ಬಲಪಡಿಸುವ ಅಗತ್ಯತೆಯಲ್ಲಿ ಲಜಪತ್ ರಾಯ್ ಅವರ ಹಿಂದೂ-ಪರ ನಿಲುವು ಮುಖ್ಯವಾಗುತ್ತದೆ. ಭಾರತೀಯರಲ್ಲಿ ಏಕತೆ ಮತ್ತು ಹೆಮ್ಮೆಯ ಭಾವವನ್ನು ಬೆಳೆಸಲು ಹಿಂದೂ ತತ್ವಶಾಸ್ತ್ರ, ಸಾಹಿತ್ಯ ಮತ್ತು ಸಂಪ್ರದಾಯಗಳ ಆಳವಾದ ತಿಳುವಳಿಕೆ ಮತ್ತು ಮೆಚ್ಚುಗೆ ಅತ್ಯಗತ್ಯ ಎಂದು ಅವರು ನಂಬಿದ್ದರು. ದೇಶದ ಶ್ರೀಮಂತ ಸಾಂಸ್ಕೃತಿಕ ವಸ್ತ್ರಗಳನ್ನು ಅಳವಡಿಸಿಕೊಳ್ಳುವುದು ಮತ್ತು ಗೌರವಿಸುವುದು ವಸಾಹತುಶಾಹಿ ಆಡಳಿತದ ವಿರುದ್ಧದ ಹೋರಾಟದಲ್ಲಿ ಭಾರತದ ಸಂಕಲ್ಪವನ್ನು ಬಲಪಡಿಸುತ್ತದೆ ಎಂದು ರಾಯ್ ಪ್ರತಿಪಾದಿಸಿದರು.

ಅವರ ಹಿಂದೂ-ಪರ ದೃಷ್ಟಿಕೋನಗಳು ಸಾಮಾಜಿಕ ಸುಧಾರಣೆ ಮತ್ತು ಉನ್ನತಿಗಾಗಿ ರೂಪಿಸಿಕೊಂಡಿದ್ದಾಗಿತ್ತು. ಲಜಪತ್ ರಾಯ್ ಅವರು ಭಾರತೀಯ ಭಾಷೆಗಳು, ಇತಿಹಾಸ ಮತ್ತು ತತ್ವಶಾಸ್ತ್ರದ ಬೋಧನೆಗೆ ಒತ್ತು ನೀಡಿದ ಶೈಕ್ಷಣಿಕ ಸುಧಾರಣೆಗಳನ್ನು ಪ್ರತಿಪಾದಿಸಿದರು, ಯುವಕರನ್ನು ತಮ್ಮ ಬೇರುಗಳೊಂದಿಗೆ ಮರುಸಂಪರ್ಕಿಸುವ ಗುರಿಯನ್ನು ಹೊಂದಿದ್ದರು. ಅವರು ಭಾರತೀಯ ಪರಂಪರೆಯ ಬಗ್ಗೆ ಹೆಮ್ಮೆಯ ಭಾವವನ್ನು ತುಂಬುವ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸಿದರು, ಆ ಮೂಲಕ ಭವಿಷ್ಯದ ಪೀಳಿಗೆಗೆ ರಾಷ್ಟ್ರದ ಪ್ರಗತಿಗೆ ಧನಾತ್ಮಕ ಕೊಡುಗೆ ನೀಡಲು ಅಧಿಕಾರ ನೀಡಿದರು. ಹೆಚ್ಚುವರಿಯಾಗಿ, ಲಜಪತ್ ರಾಯ್ ಅವರು ಹಿಂದೂಗಳ ವಿರುದ್ಧ ಯಾವುದೇ ರೀತಿಯ ತಾರತಮ್ಯವನ್ನು ತೀವ್ರವಾಗಿ ವಿರೋಧಿಸಿದರು ಮತ್ತು ಏಕೀಕೃತ ಭಾರತದ ಚೌಕಟ್ಟಿನೊಳಗೆ ಎಲ್ಲಾ ಸಮುದಾಯಗಳಿಗೆ ಸಮಾನ ಹಕ್ಕುಗಳಿಗಾಗಿ ಪ್ರತಿಪಾದಿಸಿದರು. ಅವರು ಹಿಂದೂ-ಮುಸ್ಲಿಂ ಏಕತೆಯ ಕಲ್ಪನೆಯನ್ನು ತೀವ್ರವಾಗಿ ಬೆಂಬಲಿಸಿದರು, ಬ್ರಿಟಿಷ್ ಆಳ್ವಿಕೆಯಿಂದ ಭಾರತದ ಸ್ವಾತಂತ್ರ್ಯವನ್ನು ಸಾಧಿಸಲು ವಿವಿಧ ಧಾರ್ಮಿಕ ಸಮುದಾಯಗಳ ನಡುವೆ ಪರಸ್ಪರ ಗೌರವ ಮತ್ತು ಸಹಕಾರದ ಅಗತ್ಯವನ್ನು ಒತ್ತಿ ಹೇಳಿದರು.

ಲಾಲಾ ಲಜಪತ್ ರಾಯ್ ಅವರು ಹಿಂದೂ-ಪರವಾದ ಭಾವನೆಗಳನ್ನು ಪ್ರತಿಪಾದಿಸಿದಾಗ, ಭಾರತಕ್ಕಾಗಿ ಅವರ ದೃಷ್ಟಿಕೋನವು ಎಲ್ಲ ಸಮುದಾಯಗಳ ನಡುವೆ ಏಕತೆಯನ್ನು ಬೆಳೆಸುವ ಗುರಿಯನ್ನು ಹೊಂದಿದೆ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ. ಭಾರತದ ಶಕ್ತಿಯು ಅದರ ವೈವಿಧ್ಯತೆ ಮತ್ತು ಬಹುತ್ವದ ಬಟ್ಟೆಯಲ್ಲಿದೆ ಎಂದು ಅವರು ದೃಢವಾಗಿ ನಂಬಿದ್ದರು.ಅವರ ಜೀವನದುದ್ದಕ್ಕೂ, ಲಜಪತ್ ರಾಯ್ ಅವರ ದೃಷ್ಟಿಕೋನಗಳು ಏಕೀಕೃತ ಮತ್ತು ಸಂಸ್ಕೃತಿಭರಿತ ಭಾರತಕ್ಕಾಗಿ ಮಿಡಿದಿವೆ.

ಸ್ವಾತಂತ್ರ್ಯದ ಕಾರಣಕ್ಕಾಗಿ ಅವರ ಪಟ್ಟುಬಿಡದ ಸಮರ್ಪಣೆ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಅವರ ಅಚಲ ಬದ್ಧತೆಯು ಪೀಳಿಗೆಗೆ ಸ್ಫೂರ್ತಿ ನೀಡುತ್ತಲೇ ಇದೆ, ಕೇವಲ ಧಾರ್ಮಿಕ ಅಥವಾ ಸೈದ್ಧಾಂತಿಕ ಗಡಿಗಳನ್ನು ಮೀರಿದ ನಿರಂತರ ಪರಂಪರೆಯನ್ನು ಬಿಟ್ಟುಬಿಡುತ್ತದೆ. ಲಾಲಾ ಲಜಪತ್ ರಾಯ್ ಅವರು ಭಾರತ ಮತ್ತು ಅದರ ಜನರ ಮೇಲಿನ ಅವರ ಅಚಲ ಪ್ರೀತಿಗಾಗಿ ಪೂಜ್ಯ ವ್ಯಕ್ತಿಯಾಗಿ ಉಳಿದಿದ್ದಾರೆ.



# ಬಿಜೆಪಿ ಕಾರ್ಯಕರ್ತರೆಂದರೆ ಇವರೇ . .

**ಇಂ**ದಿಗೂ ಬಿಜೆಪಿ 'ಕಾರ್ಯಕರ್ತರಾಧಾರಿತ ಪಕ್ಷ' ಆಗಿರುವುದಕ್ಕೆ, 'ಪಾರ್ಟಿ ವಿತ್ ಡಿಫರೆನ್ಸ್' ಆಗಿ ಉಳಿದಿರುವುದಕ್ಕೆ ಕಾರಣ ಕಾರ್ಯಕರ್ತರೇ. ಇಂತಹ ಕಾರ್ಯಕರ್ತರ ನಡೆ ನುಡಿಗಳನ್ನು ನಿರಂತರ ಮೆಲುಕು ಹಾಕುತ್ತಿದ್ದರೆ ಸಂಘಟನಾ ಕಾರ್ಯಕ್ಕೆ ಒಂದಿಷ್ಟು ಪ್ರೇರಣೆ. ಇಲ್ಲಿ ಉಲ್ಲೇಖಿಸುತ್ತಿರುವುದು ಬಹಳ ಹಿಂದಿನ ಕಾರ್ಯಕರ್ತರ ನಡೆಗಳೇನಲ್ಲ. ಇತ್ತೀಚೆಗೆ ತಾನೇ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಯುವ ಕಾರ್ಯಕರ್ತರ ನಡೆಗಳಿವು. ಈ ಕಿರಿಯ ಕಾರ್ಯಕರ್ತರ ನಡೆ ಹಿರಿಯರಿಗೆ ಸ್ಫೂರ್ತಿ, ಕಿರಿಯರಿಗೆ ಆದರ್ಶ.

ಸಂಘಟನೆಯ ಹಿರಿಯರಿಂದ ಕೂಡಲೇ ಲಗೇಜನ್ನು ತೆಗೆದುಕೊಂಡು ಹೊರಟು ಬಾ ಎಂಬ ಕರೆ ಬಂತು. ಎಲ್ಲಿಗೆ ಎಂದು ಕೇಳಲಿಲ್ಲ. ಅವನಿಗೆ ಗೊತ್ತಿತ್ತು, ಎಲ್ಲಿಗೆ ಹೋದರೂ ಸಂಘಟನೆಯ ಕೆಲಸವೇ. ಕಾರ್ಯದ ಸ್ವರೂಪ ಬೇರೆಯಾಗಬಹುದು, ಕಾರ್ಯಕ್ಷೇತ್ರ ಬೇರೆಯಾಗಬಹುದು. ಸಮಾಜದ ಕೆಲಸವೆಂದು ಸಂಘಟನೆಯ ಜವಾಬ್ದಾರಿಯನ್ನು ಹೊತ್ತವನಿಗೆ ಕಾರ್ಯಕ್ಷೇತ್ರ, ನಿರ್ವಹಿಸಬೇಕಾದ ಕಾರ್ಯ ಯಾವುದಾದರೇನು?. ರಾಜಕಾರಣವನ್ನು ಸಮಾಜದ ಸೇವೆಗೆ ಇರುವ ಸಾಧನವೆಂಬ ವ್ರತವನ್ನು ಸ್ವಯಂ ಸ್ವೀಕರಿಸಿದ ಬಿಜೆಪಿ ಕಾರ್ಯಕರ್ತನಿಗೆ ಕಾರ್ಯದ ಸ್ವರೂಪ, ಕಾರ್ಯಕ್ಷೇತ್ರ ಮುಖ್ಯವೇ ಅಲ್ಲ.

ಇದ್ದಿದ್ದು ರಾಜ್ಯ ಸರ್ಕಾರಿ ನೌಕರಿಯಲ್ಲಿ. ಸಂಘಟನೆಯ ಹಿರಿಯರು ಹೇಳಿದರು 'ನಿನ್ನ ಸೇವೆ ಸಂಘಟನೆಗೆ ಅವಶ್ಯಕತೆಯಿದೆ, ರಾಜೀನಾಮೆ ಕೊಟ್ಟು ಸಂಘಟನೆಯ ಜವಾಬ್ದಾರಿ ತೆಗೆದುಕೊಳ್ಳಬೇಕು' ಎಂದು. ಮರು ಮಾತನಾಡದೆ ರಾಜೀನಾಮೆ ನೀಡಿ ಸಂಘಟನೆಯ ಕಾರ್ಯದಲ್ಲಿ ತೊಡಗಿಸಿ ಕೊಂಡರು. ಜವಾಬ್ದಾರಿಯನ್ನು ತ್ಯಜಿಸಬೇಕಾದ ಸಂದರ್ಭ ಬಂದಾಗಲೂ ಅದೇ ಸ್ಥಿತಪ್ರಜ್ಞತೆಯಿಂದ ಸಂಘಟನೆಯ ಜವಾಬ್ದಾರಿ ಸ್ಥಾನಕ್ಕೂ ರಾಜೀನಾಮೆ ಕೊಟ್ಟರು. ಧ್ಯೇಯನಿಷ್ಠ ಕಾರ್ಯಕರ್ತನಿಗೆ ಸಂಘಟನೆಯ ಸೂಚನೆಯನ್ನು ಪಾಲಿಸುವುದೇ ಕಾಯಕ.

ಪಕ್ಷದಲ್ಲಿ ತನಗೊಂದು ಜವಾಬ್ದಾರಿ ಬೇಕೆಂದು ಹಿರಿಯರ ಬಳಿ ಅಪೇಕ್ಷಿಸಿದರು. ರಾಜಕಾರಣ ಅದಕ್ಕೆ ಅವಕಾಶ ನೀಡಲಿಲ್ಲ. ನಿರಾಸೆಯಾಯಿತಾದರೂ ಆಕ್ರೋಶಗೊಳ್ಳಲಿಲ್ಲ. ಅಂದು ತನಗೆ ಜವಾಬ್ದಾರಿ ಕೊಡುವುದಕ್ಕೆ ಎಂತಹ ಕಾರಣವಿತ್ತೋ, ಇಂದು ತನಗೆ ಜವಾಬ್ದಾರಿಯ ನಿರಾಕರಣೆಗೂ ಅಂತಹುದೇ ಕಾರಣವಿರಬಹುದು ಎಂಬ ನಂಬಿಕೆಯನ್ನು ತನ್ನ ಹಿರಿಯರ ಮೇಲೆ ಇರಿಸಿದ್ದ. ಏಕೆಂದರೆ ಅವನು ಪಕ್ಷದ ಹಿರಿಯರ ಮೇಲೆ ನಂಬಿಕೆಯಿಟ್ಟಿದ್ದ ಬದ್ಧತೆಯುಳ್ಳ ಕಾರ್ಯಕರ್ತ.

ಭೇಟಿ ಮಾಡಲು ಬಂದ ಕಾರ್ಯಕರ್ತರೊಬ್ಬರಿಗೆ ಹಿರಿಯ ಪದಾಧಿಕಾರಿಯೊಬ್ಬರು ವಸ್ತುವನ್ನು ಕೊಟ್ಟು ಅದನ್ನು ಒಬ್ಬ ವ್ಯಕ್ತಿಗೆ ತಲುಪಿಸುವಂತೆ ಹೇಳಿದರು. ಹಾಗೆಯೇ ವಸ್ತುವಿನ ಬಗ್ಗೆ ವರಣೆಯನ್ನೂ ಕೊಟ್ಟರು. ಅದೊಂದು ಬೆಳ್ಳಿಯ ವಿಗ್ರಹ. ಸುಮಾರು ಒಂದರಿಂದ ಒಂದೂವರೆ ಕೆಜಿ ತೂಕದ್ದು. ಮಾಡಿಸಿಕೊಂಡ ಕೆಲಸಕ್ಕೆ ಪ್ರತಿಯಾಗಿ ವ್ಯಕ್ತಿಯೊಬ್ಬರು ಉಡುಗೊರೆಯಾಗಿ ಕೊಟ್ಟು ಹೋಗಿ ಬಿಟ್ಟಿದ್ದರು. ಬೆಳ್ಳಿಯದೆಂದು ತಿಳಿದ ಕೂಡಲೇ ಅದನ್ನು ಹಿಂದಿರುಗಿಸಲು ಉದಾಹರಿಸಿದ ಈ ಎಲ್ಲಾ ಕಾರ್ಯಕರ್ತರುಗಳ ಈ ನಡೆಗಳನ್ನು ಮೆಲುಕು ಹಾಕುತ್ತಿದ್ದರೆ ನಮ್ಮ ರಾಜಕೀಯ ಜೀವನಕ್ಕೊಂದಿಷ್ಟು ಪ್ರೇರಣ ಇಂಧನ ದೊರಕೀತು.



# ಅಯೋಧ್ಯೆ ಶ್ರೀರಾಮಮಂದಿರ ಲೋಕಾರ್ಪಣೆ

## ಮಂತ್ರಾಕ್ಷತೆ ವಿತರಣೆ



22 ಜನವರಿ 2024 ರಂದು ಅಯೋಧ್ಯೆಯಲ್ಲಿ ಶ್ರೀರಾಮ ಜನ್ಮಸ್ಥಾನದಲ್ಲಿ ಭವ್ಯ ಮಂದಿರದ ಲೋಕಾರ್ಪಣೆ ಹಾಗೂ ಗರ್ಭಗುಡಿಯಲ್ಲಿ ಶ್ರೀ ರಾಮಲ್ಲಲಾ (ಬಾಲರಾಮ)ನ ನೂತನ ವಿಗ್ರಹ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ದೇಶದಾದ್ಯಂತ ಮನೆಮನೆಗಳಿಗೆ ಅಯೋಧ್ಯೆಯಲ್ಲಿ ಪೂಜಿಸಲ್ಪಟ್ಟ ಮಂತ್ರಾಕ್ಷತೆಯನ್ನು ವಿತರಿಸುವ ಅಭಿಯಾನವನ್ನು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಹಮ್ಮಿಕೊಂಡಿದೆ.

## ಮನೆ ಮನೆ ಸಂಪರ್ಕ ಅಭಿಯಾನ



ಜನವರಿ 1 ರಿಂದ ಜನವರಿ 15 ರ ತನಕ ಮನೆ ಮನೆ ಸಂಪರ್ಕ ಅಭಿಯಾನ. ಜನವರಿ 22 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯ ಸುಮುಹೂರ್ತದಲ್ಲಿ ಶ್ರೀರಾಮ ದೇವರ ಪ್ರಾಣ ಪ್ರತಿಷ್ಠೆ ನಡೆಯಲಿರುವ ಅಮೃತಗಳಿಗೆಯನ್ನು ಪ್ರತಿಯೊಬ್ಬ ರಾಮಭಕ್ತರು ತಮ್ಮ ಊರು, ಮನೆಗಳಲ್ಲಿ ಸಂಭ್ರಮ ಆಚರಿಸಲು ಪ್ರತೀ ಮನೆಗೆ ಪವಿತ್ರ ಮಂತ್ರಾಕ್ಷತೆ, ರಾಮಮಂದಿರದ ಭಾವಚಿತ್ರ, ಮತ್ತು ಆಮಂತ್ರಣ ಪತ್ರ, ನೀಡಿ 22 ರಂದು ನಡೆಯುವ ಕಾರ್ಯಕ್ರಮದ ವಿವರವನ್ನು ತಿಳಿಸಲಾಗುವುದು.

## ವಿಶೇಷ ಪೂಜೆ ನಡೆಸಲು ಕರೆ



ಜನವರಿ 22 ರಂದು ಎಲ್ಲಾ ಧಾರ್ಮಿಕ ಕೇಂದ್ರಗಳಲ್ಲಿ ವಿಶೇಷ ಪೂಜೆಯೊಂದಿಗೆ 'ಶ್ರೀ ರಾಮ ಜಯರಾಮ ಜಯ ಜಯ ರಾಮ' ಎಂಬ ತಾರಕ ಮಂತ್ರದ 108 ಬಾರಿ ಜಪ, ಹನುಮಾನ್ ಚಾಲೀಸಾ ಪಠಣ, ಭಜನೆ, ಕೀರ್ತನೆ, ಸುಂದರ ಕಾಂಡ ಪಾರಾಯಣ, ರಾಮರಕ್ಷಾ ಸ್ತೋತ್ರದ ಪಠಣ ಮಾಡಲು ಕರೆ.

## ನೇರ ಪ್ರಸಾರದ ವ್ಯವಸ್ಥೆ



ಜನವರಿ 22 ರಂದು ಶ್ರೀ ರಾಮಲ್ಲಲಾ (ಬಾಲರಾಮ) ನ ನೂತನ ವಿಗ್ರಹ ಪ್ರತಿಷ್ಠಾಪನೆಯ ಹಾಗೂ ಅಯೋಧ್ಯೆಯಲ್ಲಿ ನಡೆಯುವ ಎಲ್ಲ ವೈದಿಕ ಮತ್ತು ಧಾರ್ಮಿಕ, ಕಾರ್ಯಕ್ರಮಗಳನ್ನು ನೇರಪ್ರಸಾರದ ಮೂಲಕ ನೋಡುವ ವ್ಯವಸ್ಥೆ ಮಾಡಲಾಗಿದೆ.

## ದೀಪಾವಳಿ ಹಬ್ಬದ ಸಡಗರ



ಪ್ರಾಣ ಪ್ರತಿಷ್ಠಾಪನೆ ದಿನದ ಸಾಯಂಕಾಲ ಸೂರ್ಯಾಸ್ತದ ನಂತರ ಪ್ರತಿಯೊಬ್ಬ ರಾಮಭಕ್ತರು ತಮ್ಮ ತಮ್ಮ ಮನೆಯ ಮುಂದೆ ಎಲ್ಲ ದೇವಾದಿ ದೇವತೆಗಳನ್ನು ಪ್ರಸನ್ನಗೊಳಿಸಲು ಕನಿಷ್ಠ 5 ದೀಪಗಳನ್ನು ಬೆಳಗುವುದರೊಂದಿಗೆ ಮತ್ತೊಮ್ಮೆ ದೀಪಾವಳಿಯನ್ನು ಆಚರಿಸುವುದು. ಅಯೋಧ್ಯೆ ಶ್ರೀರಾಮ ಮಂದಿರವಿರುವ ಉತ್ತರ ದಿಕ್ಕಿಗೆ ಮುಖ ಮಾಡಿ ಮಹಾ ಮಂಗಳಾರತಿಯನ್ನು ಮಾಡುವುದರ ಮೂಲಕ ಶ್ರೀರಾಮಚಂದ್ರ ದೇವರ ಕೃಪೆಗೆ ಪಾತ್ರರಾಗುವುದು.

## ಅಯೋಧ್ಯೆಗೆ 1,000 ವಿಶೇಷ ರೈಲು ಸಂಚಾರ



ಶ್ರೀರಾಮಮಂದಿರ ಉದ್ಘಾಟನೆಯ ಮೊದಲ 100 ದಿನಗಳಲ್ಲಿ ಬೇಡಿಕೆಯ ಹೆಚ್ಚಳವನ್ನು ಸರಿಹೊಂದಿಸಲು ಭಾರತೀಯ ರೈಲ್ವೆಯು ದೇಶದ ವಿವಿಧ ಭಾಗಗಳಿಂದ ಅಯೋಧ್ಯೆಗೆ ಉಚಿತ ಪ್ರಯಾಣಕ್ಕಾಗಿ 1,000 ಕ್ಕೂ ಹೆಚ್ಚು ರೈಲುಗಳನ್ನು ಓಡಿಸುವ ಯೋಜನೆಯನ್ನು ಪ್ರಕಟಿಸಿದ್ದು. ಈ ರೈಲುಗಳು ಜನವರಿ 19 ರಿಂದ ಕಾರ್ಯಾಚರಣೆಯನ್ನು ಪ್ರಾರಂಭಿಸಲು ಸಿದ್ಧವಾಗಿವೆ.

## ದೇಶದ ಜನರಿಗೆ ಮೋದಿ ಮನವಿ





ಇಡೀ ವಿಶ್ವವೇ ಜನವರಿ 22ರಂದು ಅಯೋಧ್ಯೆಯಲ್ಲಿ ನಡೆಯುವ ಐತಿಹಾಸಿಕ ಶ್ರೀರಾಮ ಮಂದಿರ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಕಾಯುತ್ತಿದೆ. ಆದರೆ ಆ ದಿನದಂದು ಜನರು ನಗರಕ್ಕೆ ಬರಬೇಡಿ, ಕೆಲವು ಜನರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಅವರು ಆಗಮಿಸಿ ಐತಿಹಾಸ ದಿನಕ್ಕೆ ಸಾಕ್ಷಿಯಾಗಲಿದ್ದಾರೆ. ಜನವರಿ 14 ರಿಂದ 22ರವರೆಗೆ ದೇಶಾದ್ಯಂತವಿರುವ ದೇಗುಲಗಳು ಹಾಗೂ ಪ್ರೇಕ್ಷಣೀಯ ಸ್ಥಳಗಳಲ್ಲಿ ಶುಚಿತ್ವ ಅಭಿಯಾನವನ್ನು ಕೈಗೊಳ್ಳಬೇಕು ಹಾಗೂ ದೇಶದ ಎಲ್ಲ ಜನರು ತಮ್ಮ ಮನೆಗಳಲ್ಲಿ ದೀಪವನ್ನು ಬೆಳಗಿಸಿ ಇಡೀ ದೇಶವನ್ನು ಪ್ರಜ್ವಲಿಸುವಂತೆ ಮಾಡಬೇಕು.

**– ಪ್ರಧಾನಿ ಶ್ರೀ ನರೇಂದ್ರ ಮೋದಿ**

**ವಿಶೇಷ ಸೂಚನೆ : ಪ್ರತಿಷ್ಠಾಪನೆಯ ದಿನ ಯಾವುದೇ ಮೆರವಣಿಗೆ, ಶೋಭಾಯಾತ್ರೆ, ಸಾರ್ವಜನಿಕ ಕಾರ್ಯಕ್ರಮ ಮತ್ತು ಪಟಾಕಿ ಸಿಡಿಸುವುದಕ್ಕೆ ಅವಕಾಶವಿರುವುದಿಲ್ಲ**

# ಪರಿವರ್ತನೆಯ ಪಥ
# ರಾಮ ಮಂದಿರ ರಥ







**ರಾ**ಮ ಅಯೋಧ್ಯೆಯಲ್ಲಿ ಹುಟ್ಟಿದ್ದು ಎನ್ನಲು ಸಾಕ್ಷಿಯೇನು? ಹೆರಿಗೆ ಮಾಡಿಸಿದ್ದ ಸೂಲಗಿತ್ತಿ ಯಾರು? ಕೋಮು ಗಲಭೆ ಶುರುಮಾಡಲು ವಿಶ್ವ ಹಿಂದೂ ಪರಿಷತ್ ಹೋರಾಟ! ಇಟ್ಟಿಗೆ, ಹೆಣದ ಬೂದಿ ಯಾತ್ರೆ, ಜ್ಯೋತಿ ಯಾತ್ರೆ, ಲೇವಡಿ ಮಾಡಿದವರು ಯಾರ್ಯಾರು? ಹಕ್ಕಿಯನ್ನು ಗುಮ್ಮಟದ ಮೇಲೆ ಹಾರಲು ಬಿಡುವುದಿಲ್ಲ! ರಾಮರಥ ಯಾತ್ರೆ ಬಿಹಾರ ದಾಟಲು ಬಿಡುವುದಿಲ್ಲ! ಕರ ಸೇವಕರ ಮೇಲೇ ಗುಂಡಿನದಾಳಿ ಮಾಡಿ ಹತ್ಯೆ! ಉತ್ತರಪ್ರದೇಶಕ್ಕೆ ಹೋರಾಟಕ್ಕೆ ಬಂದ ಕರಸೇವಕರನ್ನು ತಡೆದು, ಬಂಧಿಸಿ ಅನ್ನ ನೀರು ಕೊಡದೇ ಸತಾಯಿಸಿದ್ದು, ಗಲಭೆ ಆಗುವ ಅವಕಾಶವಿರುವುದರಿಂದ ಜನ್ಮಸ್ಥಾನದಲ್ಲಿ ಆಸ್ಪತ್ರೆ, ಬಸ್‌ಸ್ಟ್ಯಾಂಡ್, ಸಂಡಾಸ್ ಕಟ್ಟಲು ಸಲಹೆ ಆಗ್ರಹ ಮಾಡಿದವರು ಲಕ್ಷಾಂತರ ಮಂದಿ... ಆದರೆ ಸತ್ಯದ ಪರವಾಗಿ, ಧರ್ಮದ ಸ್ಥಾಪನೆಗಾಗಿ ಪಣವಿದು, ರಾಮನ ಮೇಲಾಣೆ, ಮಂದಿರವಲ್ಲೇ ಕಟ್ಟುವೆವು ಎಂದವರು ಸಾವಿರಾರು. ಅವರ ಧ್ವನಿ ಅಡಗಿಸಲು ವಿರೋಧಿ ಮನಸ್ಥಿತಿಯವರು ಮಾಡಿದ ಪ್ರಯತ್ನಗಳು ಒಂದೇ..ಎರಡೇ.

ಆದರೆ! ಇಂದು!! ಪ್ರತಿಷ್ಟಾಪನೆಗೆ ನಾನೂ ಹೋಗುವೆ, ಆಹ್ವಾನ ಬಂದಿಲ್ಲ, ನಮ್ಮ ಊರಿನಲ್ಲಿ ನಾವೂ ರಾಮ ಭಜನೆ ಮಾಡುತ್ತೇವೆ, ನಾವೂ ರಾಮ ಭಕ್ತರೇ, ಹಿಂದುತ್ವ ಯಾರ ಸೊತ್ತೂ ಅಲ್ಲ, ನಾವೂ ಹಿಂದುಗಳೇ, ಅನ್ನುವ ಸಂಖ್ಯೆ ದಿನೇದಿನೇ ಜಾಸ್ತಿ ಆಗುತ್ತಿದೆ. ಭಾರತದ ಪುನರ್ ನಿರ್ಮಾಣ ಆಗುತ್ತಿದೆ ಎನ್ನಲು ಬೇರೇ ಸಾಕ್ಷಿಬೇಕೇ??? ಸತ್ಯಮೇವ ಜಯತೇ. ಜಯತರಲು ಶಕ್ತಿ, ಯುಕ್ತಿ, ಭಕ್ತಿ, ವಿಜಗೀಷು ಪ್ರವೃತ್ತಿ, ನಿಸ್ವಾರ್ಥ ಭಾವ, ದೂರದೃಷ್ಟಿ, ಬದ್ಧತೆ ಹಾಗೂ ವಿವೇಕ ಪೂರ್ಣ ತೀರ್ಮಾನ ಗೊಳ್ಳುವ ಶ್ರೇಷ್ಟ ನಾಯಕತ್ವ ದೇಶಕ್ಕೆ ಅಗತ್ಯ. ಅದು ಈಗಿದೆ. ಮುಂದುವರೆಯಲಿ.

**ಬನ್ನಿ, ಶ್ರೀರಾಮನ ಸಂದೇಶ ಜಗತ್ತಿಗೇ ಸಾರೋಣ.**



**ಎಂ.ಬಿ. ಭಾನುಪ್ರಕಾಶ್**
ಬಿಜೆಪಿ ರಾಜ್ಯ ಪ್ರಕೋಷ್ಠಗಳ ಸಂಯೋಜಕರು

# ರಾಷ್ಟ್ರೀಯ ಅಸ್ಮಿತೆಯ ಪುತ್ಥಳಿ



## ಹೆಮ್ಮೆಯಿಂದ ಎದ್ದು ನಿಲ್ಲುತಿದೆ...

**ದೇಶದೆಲ್ಲೆಡೆ ಸಾವಿರಾರು ರಾಮಮಂದಿರಗಳಿರಬಹುದು. ಆದರೆ ಅವಾವುವೂ ಜನ್ಮಸ್ಥಾನದ ರಾಮಮಂದಿರಕ್ಕೆ ಸಮವಲ್ಲ. ಈ ದೇಶದ ನದಿ, ಸರೋವರಗಳಿಗೆ ಸರಯೂ ಎನಿಸಿಕೊಳ್ಳುವ ಹಪಾಹಪಿ ಇದೆ. ಕಲ್ಲು ಕಲ್ಲುಗಳಿಗೂ ಅಹಲ್ಯೆಯಂತೆ ಉದ್ಧಾರವಾಗುವ ಮಹದಿಚ್ಛೆಯಿದೆ.**

ಪಂಚ ಶತಮಾನಗಳ ಕಾಯುವಿಕೆಗೆ ಮೋಕ್ಷ ದೊರಕಿದೆ. ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮನಿಗೆ ಮತಾಂಧ-ಸೆಕ್ಯುಲರ್ ಪಾಳಯವೆಂಬ ಕೈಕೆಯಿ ವಿಧಿಸಿದ್ದ ಐತಿಹಾಸಿಕ ವನವಾಸ ಮುಗಿದು ಅವನ ಮನೆಯ ಮರುನಿರ್ಮಾಣದ ಶಿಲಾನ್ಯಾಸಕ್ಕೆ ಮುಹೂರ್ತ ಸಿದ್ಧವಾಗಿದೆ. ಸಪ್ತಮೋಕ್ಷದಾಯಕ ನಗರಗಳಲ್ಲಿ ಒಂದಾದ ಅಯೋಧ್ಯೆ ಮತ್ತೊಮ್ಮೆ ರಾಮಭದ್ರ ಜನಿಸಿದನೇನೋ ಎಂಬಂಥಾ ಸಡಗರದಲ್ಲಿ ಮಿಂದೇಳುತ್ತಿದೆ. ಈ ಮೋಕ್ಷಕ್ಕೂ ಈ ಹೊಸ ಸೃಷ್ಟಿಗೂ ಕಾರಣವಾದುದು ರಾಮನಾಮವೇ! ಧರ್ಮದ ಹಾದಿಯಲ್ಲೇ ನಡೆದು ದೇವನಾದವನ ಮೂರ್ತಿಯನ್ನು ಮರುಸ್ಥಾಪಿಸಲು ಭಕ್ತರು ಆ ದೇವ ಪಥದಲ್ಲೇ ನಡೆಸಿದ ಹೋರಾಟಕ್ಕೆ ಸಿಕ್ಕ ಪೂರ್ಣಫಲದ ಭಾವುಕ ಕ್ಷಣ. ಶತಮಾನಗಳ ಕಾಯುವಿಕೆ ಮುಗಿಯುವ ದಿನ.

**ವ್ಯಸನೇಷು ಮನುಷ್ಯಾಣಾಂ ಭೃಷಂಭವತಿ ದುಃಖಿತಃ.** ಇನ್ನೊಬ್ಬನ ಸಂಕಟವನ್ನು ಕಂಡಾಗ ತೀವ್ರವಾದ ದುಃಖಕ್ಕೆ ಒಳಗಾಗುವವನು ಎಂದು ರಾಮನನ್ನು ವರ್ಣಿಸಿದ್ದಾನೆ ಮಹರ್ಷಿ ವಾಲ್ಮೀಕಿ. ಅದಕ್ಕೇ ದುಃಖಿತರೆಲ್ಲರೂ ರಾಮನಿಗಾಗಿ ಕಾದದ್ದಿರಬೇಕು. ರಾಮ ದೂರ್ವಾದಲ ಶ್ಯಾಮ. ದೂರ್ವೆ ಎಂಬ ಮಂಗಲ ಸಸ್ಯ ಒಂಟಿಯಾಗಿ ಬೆಳೆಯುವುದೇ ಇಲ್ಲ. ಅದು ಗುಂಪು ಗುಂಪಾಗಿಯೇ ಬೆಳೆಯುವುದು. ಮಂಗಲಪುರುಷ ಶ್ರೀರಾಮನೂ ಹಾಗೆಯೇ. ಸಮಷ್ಠಿಯ ಹಿತವನ್ನಾತ ಬಯಸುತ್ತಿದ್ದ. ಆದುದರಿಂದಲೇ ರಾಮ ನಡೆದ ಹಾದಿಯಲ್ಲಿದ್ದು ಪುನೀತವಾದ ಕಲ್ಲುಗಳು, ಬೀಸುವ ಗಾಳಿ, ಅವನಿಗಾಗಿ ಬಾಗುವ ತರುಲತೆಗಳೂ ರಾಮನ ಕಥೆಯನ್ನು ಸಾರಿ ಹೇಳಿವೆ. ವಾನರರು ಸಮುದ್ರಕ್ಕೆ ಒಗೆದಿದ್ದ ಸೇತುವಿನ ಕಲ್ಲೂ ತಾನು ರಾಮನ ಕಾಲದವನೆಂದು ಸಾರಿ ಹೇಳುತ್ತಿದೆ. ಸ್ವತಃ ರಾಕ್ಷಸರುಗಳನ್ನು ಸಂಹಾರ ಮಾಡುವ ಸಾಮರ್ಥ್ಯವಿದ್ದಾಗ್ಯೂ ಬ್ರಹ್ಮರ್ಷಿ ವಿಶ್ವಾಮಿತ್ರ ರಾಮನನ್ನು ಮಾಧ್ಯಮವಾಗಿ ಬಳಸಿ ಧರ್ಮದ ಒಳಸೂಕ್ಷ್ಮತೆಯ ಅರಿವನ್ನೂ ಮೂಡಿಸಿದ. ಈ ಜಗದಲ್ಲಿ ಧರ್ಮದ-ಸಂಸ್ಕೃತಿಯ ರಕ್ಷಣೆಗೆ ತಾನೊಂದು ಮಾಧ್ಯಮ ಎನ್ನುವುದನ್ನು ಬಾಲರಾಮ ಅರ್ಥ ಮಾಡಿಕೊಂಡಿದ್ದ. ಮಾಧ್ಯಮಕ್ಕೆ ವೈಯಕ್ತಿಕತೆ ಇರುವುದಿಲ್ಲ. ಅದಕ್ಕೆ ತನ್ನ ಪರಂಪರೆಯ ಬಗೆಗೆ ಪೂಜ್ಯ ಭಾವನೆ ಇರುತ್ತದೆ. ಸಂಸ್ಕೃತಿಯ ಉಳಿವಿಗೆ ಅದು ಹಾತೊರೆಯುತ್ತದೆ. ಧರ್ಮಪಥ ದರ್ಶಕವದು. ಹೇಗಿರಬೇಕೆಂದು ಆಚರಿಸಿ ತೋರಿಸುವುದಷ್ಟೇ ಅದರ ಕರ್ತವ್ಯ. ಆ ಮಾಧ್ಯಮ ಇಲ್ಲಿನ ಜನರನ್ನು ಜೀವನ ಪ್ರವಾಹದಲ್ಲಿ ಏಕತ್ರಗೊಳಿಸಿ ಹಿಡಿದಿಟ್ಟು ಈ ರಾಷ್ಟ್ರವನ್ನು ನಿರ್ಮಿಸಿದೆ ಎಂಬ ಸೂಕ್ಷ್ಮ ಬರ್ಬರನಾದ ಬಾಬರನಿಗೆ, ಅವನಿಗೆ ಸೂಚನೆ ಕೊಟ್ಟ ಪಾಪಿ ಸೂಫಿಗೆ ಗೊತ್ತಾಗಿತ್ತು. ಈ ನೆಲದಿಂದ ಬೇರ್ಪಡಿಸಲಾಗದ ಯುಗಯುಗದ ಅಸ್ಮಿತೆಯ ಮಂದಿರ ಧರೆಗುರುಳಿತ್ತು. ಆದರೆ ಆ ಅಸ್ಮಿತೆಯ ಮೇಲಿನ ಶ್ರದ್ಧೆ ಕೆಳಗುರುಳಲಿಲ್ಲ.

ಪ್ರತಿಜ್ಞಾ ಪರಿಪಾಲನೆಯ ವಿಷಯದಲ್ಲಿ ತನ್ನ ಕಾಂತೆಗೆ ಸ್ವಯಂ ಶ್ರೀರಾಮನೇ ಹೀಗೆ ಹೇಳುತ್ತಾನೆ...

**ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಮ್।**

**ನ ತು ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ॥**

**ಹೇ ಸೀತೇ, ಸಮಸ್ತ ಜೀವಿಗಳಿಗೂ ಅತ್ಯಂತ ಪ್ರಿಯವಾದ ಪ್ರಾಣವನ್ನಾದರೂ ಬಿಟ್ಟೇನು! ಪ್ರಾಣಕ್ಕಿಂತ ಪ್ರಿಯಳಾದ ನಿನ್ನನ್ನಾದರೂ ಬಿಟ್ಟೇನು! ನಿನಗಿಂತ ಪ್ರಿಯನಾದ ಲಕ್ಷ್ಮಣನನ್ನಾದರೂ ಬಿಟ್ಟೇನು! ಆದರೆ ಒಮ್ಮೆ ಕೈಗೊಂಡ ಪ್ರತಿಜ್ಞೆಯನ್ನೆಂದಿಗೂ ಬಿಡಲಾರೆ!** ರಾಮಭಕ್ತರೂ ರಾಮಮಂದಿರವನ್ನು ರಾಮನ ಜನ್ಮಸ್ಥಾನದಲ್ಲೇ ಮರುನಿರ್ಮಿಸುವ ತಮ್ಮ ಪ್ರತಿಜ್ಞೆಯಿಂದ ಒಂದಿನಿತೂ ಕದಲದೇ ಮಂದಿರಕ್ಕೆ ತಳಪಾಯ ಹಾಕಿಯೇ ಬಿಟ್ಟರು. ಅದೆಷ್ಟು ಕಾಲ, ಅದೆಷ್ಟು ಹೋರಾಟಗಳು! ಒಂದು ಲಕ್ಷದ ಎಪ್ಪತ್ತು ಸಾವಿರ ಯೋಧರು ಫಜಲ್ ಅಬ್ಬಲ್ ಕಲಂದರ್ ಎನ್ನುವ ಫಕೀರನ ಬರ್ಬರ ಆಸೆಗೆ, ಮೀರ್ ಬಾಕಿಯ ತೋಪಿಗೆ ಎದುರಾಗಿ ಹದಿನೈದು ದಿವಸಗಳ ಕಾಲ ರಾಮಚಂದಿರನ ಮಂದಿರವನ್ನು ಉಳಿಸಲು ಘನಘೋರವಾಗಿ ಕಾದಾಡಿದರು. ಆ ಬಳಿಕ ಎಪ್ಪತ್ತೈದು ಯುದ್ಧಗಳು, ಸಾಧುಸಂತರ, ರಾಮಭಕ್ತರ ಸತ್ಯಾಗ್ರಹ, ಉಪವಾಸ, ಪಾದಯಾತ್ರೆ, ರಾಮಜ್ಯೋತಿ ರಥಯಾತ್ರೆ, ರಾಮಪಾದುಕಾಯಾತ್ರೆ, ಕರಸೇವೆ, ಕರಸೇವಕರ ಬಲಿದಾನ; ಅದೆಷ್ಟು ಸಂತರು ರಾಮಮಂದಿರಕ್ಕಾಗಿ ಅಗ್ನಿಕುಂಡಕ್ಕೆ ಹಾರಿಯೋ, ಶೂಲಕ್ಕೇರಿಯೋ, ಉಪವಾಸಗೈದೋ ಬಲಿದಾನಗೈದರು! ಒಂದು ಬಾರಿಯಂತೂ 3500 ಮಾತಾಭಗಿನಿಯರು ಶಸ್ತ್ರ ಹಿರಿದು ಕಾದಿದರು. ಈ ಹೋರಾಟಗಳೆಲ್ಲವೂ ಕೇವಲ ಒಂದು ಮಂದಿರದ ಮರುನಿರ್ಮಾಣಕ್ಕಾಗಿ ನಡೆದ ಹೋರಾಟವಲ್ಲ; ಅದು ಒಂದು ಬದುಕಿನ ಉಳಿವಿಗಾಗಿ, ಒಂದು ಸಂಸ್ಕೃತಿಯ ರಕ್ಷಣೆಗಾಗಿ ನಡೆದ ಹೋರಾಟ. ಮನಸ್ಸು ಮಾಡಿದ್ದರೆ ನ್ಯಾಯಾಲಯದ ಪ್ರಕ್ರಿಯೆಯನ್ನು ವಿಳಂಬಪಡಿಸುವ ಗುಂಪುಗಳು, ಅವುಗಳ ಮಾನಸಿಕತೆ, ರಾಜಕೀಯ ಷಡ್ಯಂತ್ರ ಇವೆಲ್ಲವುಗಳನ್ನೂ ರಾಮಭಕ್ತರು ಒಂದೇ ಏಟಿಗೆ ಕೊನೆಗೊಳಿಸಬಹುದಿತ್ತು. ಆದರೆ ರಾಮಭಕ್ತರು ಈ ನೆಲದ ಕಾನೂನಿಗೆ ಗೌರವ ಕೊಟ್ಟು ರಾಮ ನಡೆದ ಹಾದಿಯಲ್ಲಿ ಸಾಗಿದರು, ಕಾದರು. ಆ ಕಾಯುವಿಕೆಯೆಂಬ ತಪಸ್ಸಿನ ಪುಣ್ಯಫಲವೇ ಶಿಲಾನ್ಯಾಸ. ಕೋಟಿ ಕೋಟಿ ಮನಸ್ಸುಗಳ ಐನೂರು ವರ್ಷಗಳ ಸಂಕಲ್ಪ ಇಂದು ರಾಷ್ಟ್ರೀಯ ಅಸ್ಮಿತೆಯ ಜೀವಂತ ಪುತ್ಥಳಿಯಾಗಿ ಶಿಲಾನ್ಯಾಸಗೊಳ್ಳುತ್ತಿದೆ.

492 ವರ್ಷಗಳ ಬಳಿಕ ರಾಷ್ಟ್ರೀಯ ಅಸ್ಮಿತೆಯ ಪುತ್ಥಳಿ ಎದ್ದು ನಿಲ್ಲುತ್ತಿದೆ. ಈ ಹೋರಾಟ, ಈ ಶಿಲಾನ್ಯಾಸ, ಈ ಮಂದಿರ, ಉರುಳಿದ ಅಸಂಖ್ಯ ದೇಗುಲಗಳು ಮತ್ತೆ ಎದ್ದು ನಿಲ್ಲಲು ಪ್ರೇರಣೆಯಾಗಲಿ. ಭವ್ಯ ರಾಮಮಂದಿರದಿಂದ ಹೊರಟ ಶಂಖನಾದ ಕಾಶಿ, ಮಥುರೆಗಳ ಮೂಲಕವೂ ಹಾದು ಕಾಶ್ಮೀರದ ಶಾರದಾ ಪೀಠದಲ್ಲಿ ಅನುರಣಿಸಲಿ. ಪ್ರತಿಯೊಬ್ಬನೂ ರಾಮ ನಡೆದ ಹಾದಿಯಲ್ಲಿ ನಡೆಯುವಂತಾಗಲಿ.



## ಬರೀ ಗುಡಿಯಲ್ಲ, ಧರ್ಮದ ಸಂಕೇತ

500 ವರ್ಷಗಳ ಪರ್ಯಂತ ಭಕ್ತರ ಹೃದಯದಲ್ಲೇ ಪುತ್ಥಳಿಯಾಗಿದ್ದವನ ವಿಗ್ರಹ ಪ್ರತಿಷ್ಠಾಪನೆಗೆ ಶಿಲಾನ್ಯಾಸ. ರಾಮೋ ವಿಗ್ರಹವಾನ್ ಧರ್ಮಃ; ಧರ್ಮವೇ ವಿಗ್ರಹವಾಗಿದ್ದವನ ಮೂರ್ತಿಗೆ ಶಿಲಾನ್ಯಾಸ, ಹಾಗೂ ಬೃಹತ್ ಮಂದಿರ ನಿರ್ಮಾಣ. ಅದು ಬರಿಯ ಕಲ್ಲು ಗುಡಿಯಲ್ಲ; ಅದು ಈ ದೇಶದ ಅಸ್ಮಿತೆಯ ಪ್ರತೀಕ. ಭಕ್ತರ ಹೃದಯದಲ್ಲಿ ಕುಳಿತಿರುವ ಮೂರ್ತಿ ರಾಷ್ಟ್ರೀಯ ಅಸ್ಮಿತೆಯ ಜೀವಂತ ಪುತ್ಥಳಿಯಾಗಿ ಎದ್ದು ನಿಲ್ಲುತ್ತದೆ. ಅಲ್ಲಿ ರಾಮನ ಪದಸ್ಪರ್ಶದಿಂದ ಪುನೀತವಾದ ಈ ಮಣ್ಣಿನ ಕಣಕಣಗಳು ಹೇಳುವ ರಾಮಾಯಣದ ಮೂಲ ರೂಪವಿದೆ.


ಅಸಂಖ್ಯ ಯುದ್ಧಗಳಲ್ಲಿ ಮಂದಿರಕ್ಕಾಗಿ ರಕ್ತವನ್ನೇ ಬಸಿಬಸಿದು ಕೊಟ್ಟವರ ಪೌರುಷದ ಪ್ರತೀಕವಿದೆ. ಜಾತಿಯ, ಭಾಷೆಯ ದುರಾಭಿಮಾನಗಳಿಲ್ಲದೆ, ಗುಡಿಗುಂಟೆಗಳ ಹಂಗಿಲ್ಲದೆ, ಆ ಧರ್ಮದೇವತೆಯನ್ನು ಪೂಜಿಸಿದ, ಪೂಜಿಸುವ ಮನಸ್ಸುಗಳ ಭಾವವಿದೆ. ಮಂದಿರದ ಉಳಿವಿಗಾಗಿ, ಮರುನಿರ್ಮಿತಿಗಾಗಿ ಹಣಿದು ಅಳಿದವರ ಪರಿವಾರಗಳ ರೋಷ, ಆಕ್ರೋಶ, ದುಃಖ, ಭಕ್ತಿ-ಭಾವಗಳ ಮೇಳೈಸುವಿಕೆಯಿದೆ. ತಮ್ಮ ಮನೆಯಲ್ಲೂ ರಾಮ ಹುಟ್ಟಬೇಕು, ಅವನ ಮಂದಿರದ ಮರು ನಿರ್ಮಾಣವಾಗಬೇಕು ಎಂದವರ ಹಪಾಹಪಿಕೆಯಿ ಇಂದಿಗೆ ನನಸಾಗುತ್ತಿದೆ.

ವಿದ್ವಜ್ಜನರ ಅಧ್ಯಯನ, ಅಧ್ಯಾಪನ, ಲೇಖನ, ಭಾಷಣ, ಕಾವ್ಯ, ಪದ್ಯ, ಗದ್ಯ, ನಾಟ್ಯ, ನಟನೆಗಳಲ್ಲಿ ಜನಪದರ ಹಾಡುಹಬ್ಬಗಳಲ್ಲಿ, ಋತ್ವಿಜರ ಹೋಮ-ಹವನಗಳಲ್ಲಿ; ಪೂಜಕರ ಆರಾಧನೆಯಲ್ಲಿ, ಕ್ಷತ್ರಿಯರ ತೋಳ್ಬಲಗಳಲ್ಲಿ, ದಾನಿಗಳ ದಾನಗಳಲ್ಲಿ, ಶ್ರಮಿಕರ ಕೆಲಸಗಳಲ್ಲಿ; ಈ ನೆಲದ ಕಾನೂನಿನಂತೆಯೇ ಹೋರಾಡಿದ ಬಗೆಬಗೆಯ ಹೋರಾಟ-ಬುದ್ಧಿಮತ್ತೆಗಳಲ್ಲಿ ಕಂಡಂತಹ ಧರ್ಮದ ಮೂಲ ರೂಪಕ್ಕೆ ಅಲ್ಲಿ ಶಿಲಾನ್ಯಾಸವಾಗುತ್ತಿದೆ.



## ಕಾಯುವಿಕೆ, ಮುಕ್ತಿ ಮತ್ತು ರಾಮ

ರಾಮನಿಗಾಗಿ ಯಾರು ಕಾಯಲಿಲ್ಲ ಹೇಳಿ? ಪುತ್ರಕಾಮೇಷ್ಠಿ ನಡೆಸಿ ಕ್ಷಣವನ್ನೂ ಯುಗದಂತೆ ಭ್ರಮಿಸಿ ಕಾಲವನ್ನು ನೂಕುತ್ತಾ ದಶರಥ ಚಕ್ರವರ್ತಿಯೇ ರಾಮನಿಗಾಗಿ ಕಾದಿದ್ದ. ಗರ್ಭದಲ್ಲಿ ಅಂಕುರಗೊಂಡ ರಾಮಭದ್ರನ ಕಿಲಕಿಲ ನಗುವಿಗೆ ಮಾತೆ ಕೌಸಲ್ಯೆ ಕಾದಿದ್ದಳು. ರಾಜನ ಕೊರಗು ರಾಜ್ಯದ ಕೊರಗಾಗಿತ್ತು. ರಾಜ ಪರಿವಾರ, ಪ್ರಜಾವರ್ಗ ಪರಮ ಪುರುಷೋತ್ತಮನಿಗಾಗಿ ಕಾದಿತ್ತು. ಜಗತ್ತಿಗೇ ಮಿತ್ರನನ್ನಾಗಿ ತಯಾರು ಮಾಡಲೋಸುಗ ವಿಶ್ವಾಮಿತ್ರನೇ ಬಾಲ ರಾಮ ಬೆಳೆಯುವುದನ್ನು ಕಾಯುತ್ತಿದ್ದ. ಭೂಮಿಯನ್ನು ಉಳುವಾಗ ಸಿಕ್ಕ ಭೂಜಾತೆಯನ್ನು ಭಗವಂತನಿಗೇ ಒಪ್ಪಿಸಲು ಉಪನಿಷತ್ತುಗಳನ್ನು ಅರೆದು ಕುಡಿದ ರಾಜರ್ಷಿ ಕಾದಿದ್ದ. ತನ್ನ ಉಸ್ತುವಾರಿಯನ್ನು ದಾಟಿಸಲು ಕೊಡಲಿ ರಾಮ ಕಾದಿದ್ದ. ಅಹಲ್ಯೆ ಕಲ್ಲಾಗಿ ಕಾದಳು. ತಮ್ಮ ಭರತ ಪಾದುಕೆ ಹೊತ್ತು ಕಾದ. ಹಣ್ಣಾಗಿ ಪಕ್ವವಾಗಿದ್ದ ಶಬರಿ ಹಣ್ಣುಹಣ್ಣು ಮುದುಕಿಯಾಗಿ ಬಾಗಿ ಕಾದಳು. ಪಂಚವಟಿ, ದಂಡಕಾರಣ್ಯದ ಋಷಿಗಳು ರಕ್ಕಸರ ಉಪಟಳವನ್ನು ಅಳಿಸುವವನನ್ನು ಕಾದರು. ರಾವಣನ ಕುತಂತ್ರಕ್ಕೆ ಸಿಲುಕಿ ರೆಕ್ಕೆ ಕತ್ತರಿಸಲ್ಪಟ್ಟು ಬಿದ್ದ ಜಟಾಯು ಕುಟುಕು ಜೀವ ಉಳಿಸಿಕೊಂಡು ಕಾದ. ತನ್ನೊಳಗಿರುವ, ತಾನೇ ಅವನಾಗಿರುವ ಭಗವಾನನಿಗಾಗಿ ಭಕುತ ಹನುಮ ಕಾದ. ರಾಮನಂಥ ಶಕ್ತಿವಂತ ಮಿತ್ರನಿಗಾಗಿ ವಾನರೇಂದ್ರ ಸುಗ್ರೀವ ಕಾದ. ಸೇತುವಿಗಾಗಿ ಸಮುದ್ರ ಕಾದಿತ್ತು, ಸೇವೆಗಾಗಿ ಅಳಿಲು ಕಾದಿತ್ತು. ಕಪಿಗಣ ಮಾನವೇಂದ್ರನ ಸಹಾಯಕ್ಕಾಗಿ ಶಿಸ್ತಿನಿಂದ ಕಾದಿತ್ತು. ಅಣ್ಣನ ಅಧರ್ಮದ ಅಂಕುಶದಿಂದ ಪಾರಾಗಿ ಧರ್ಮವನ್ನು ಅಪ್ಪಿಕೊಳ್ಳಲು ಶರಣ ಶ್ರೇಷ್ಠ ಕಾದಿದ್ದ. ರಾಮ ಬಾಣ ತಾಗಿ ಮೋಕ್ಷ ಪಡೆಯಲು ದುರುಳರೂ, ರಕ್ಕಸರೂ ಕಾದಿದ್ದರು. ಮಾತೆ ಸೀತೆ ತನ್ನಿನಿಯ ಬಂದು ಕಾಯ್ವನೆಂದು ಅಶೋಕ ವನದಲ್ಲಿ ಶೋಕತಪ್ತಳಾಗಿ ಕಾದಿದ್ದಳು. ವನವಾಸ ಮುಗಿಸಿ ಮರಳಿ ಬಂದು ಪಟ್ಟವೇರಿ ರಾಮರಾಜ್ಯವನ್ನಾಗಿಸಬೇಕೆಂದು ಅಯೋಧ್ಯೆಗೆ ಅಯೋಧ್ಯೆಯೇ ಕಾದು ಕುಳಿತಿತ್ತು. ಅಂತಹಾ ಪರಮ ಪುರುಷನ ಮಂದಿರವನ್ನು ಮರು ನಿರ್ಮಿಸಲು ಕೋಟಿ ಕೋಟಿ ಭಕ್ತಗಣ 492 ವರ್ಷ ರಾಮ ಮಂತ್ರ, ಜಪಿಸುತ್ತಾ, ಕಾಯುತ್ತಲೇ ಕಾದು ಕುಳಿತಿತ್ತು! ಕಾಯುವಿಕೆಗಿಂತ ಅನ್ಯ ತಪವೇನಿದೆ?






# ಅಯೋಧ್ಯೆ ಹೋರಾಟ, ಭಾವನೆಯದ್ದೇ ನೇತೃತ್ವ



ಬಿದರೆ ಪ್ರಕಾಶ್
ಸಂಪಾದಕರು, ಕಮಲಪಥ ಮಾಸಿಕ

**ಹಿಂದೂ ಧರ್ಮದ ಆಚಾರ, ವಿಚಾರ, ಸಂಸ್ಕೃತಿಗಳನ್ನು ತೆಗಳುವುದು, ತುಳಿಯುವುದೇ ತಮ್ಮ ಚಾಳಿಯಾಗಿಸಿಕೊಂಡ ಕಾಂಗ್ರೆಸ್ ನಾಯಕರು ಇಂದು ರಾಮ ಮಂದಿರ ಉದ್ಘಾಟನೆ ವಿಚಾರದಲ್ಲಿ ಮಾತುಗಳನ್ನಾರಂಭಿಸಿದ್ದಾರೆ. ಇದು ಬಿಜೆಪಿ ರಾಮ ಮಂದಿರ, ಬಿಜೆಪಿ ರಾಜಕೀಯ ಲಾಭ ಪಡೆಯುತ್ತಿದೆ, ರಾಮ ಮಂದಿರ ಎಲ್ಲರಿಗೂ ಸೇರಿದ್ದು, ನಮಗೆ ಕರೆಯೋಲೆ ಬಂದಿಲ್ಲಾ ಎಂಬೆಲ್ಲಾ ರಾಜಕೀಯ ಮಾತುಗಳನ್ನು ಪುಂಖಾನುಪುಂಖವಾಗಿ ಹರಿದು ಬಿಡುತ್ತಿದ್ದಾರೆ. ಆಗ ಇಲ್ಲದ ಕಾಳಜಿ, ಬದ್ದತೆ, ಭಕ್ತಿ ಈಗ ಇವರುಗಳಲ್ಲಿ ಆವರಿಸಿಕೊಳ್ಳುತ್ತಿದೆ. ಈಗ ರಾಮ ಬೇಕಾಗಿದ್ದಾನೆ. ಅಂದು ರಾಮನ ಅಸ್ತಿತ್ವವನ್ನು ಪ್ರಶ್ನಿಸಿದವರಿಗೆ, ರಾಮಭಕ್ತರ ಮೇಲೆಯೇ ಗುಂಡು ಹಾರಿಸಲು ಹೊರಟವರಿಗೆ ಇಂದು ರಾಮ ತಮಗೂ ಸೇರಿದ್ದಾನೆ  ಅಥವಾ ಸೇರಲಿ ಎನಿಸಿಬಿಟ್ಟಿದೆ.**







**ಸ್ವಾ**ತಂತ್ರ್ಯಾನಂತರ ನಡೆದ ಪ್ರಮುಖ ಹೋರಾಟಗಳು ಎರಡು ಮಾತ್ರ. ಶ್ರೀಮತಿ ಇಂದಿರಾಗಾಂಧಿಯವರು ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರಿದಾಗ ನಡೆದ ಹೋರಾಟ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಆದರೆ ಅದಕ್ಕಿಂತ ಮಿಗಿಲಾಗಿ ದೇಶದ ಸಾಮಾನ್ಯ ಜನರ ಭಾವನೆಗಳನ್ನು ಬಡಿದೆಬ್ಬಿಸಿದ ಹೋರಾಟವೆಂದರೆ ಅದು ಅಯೊಧ್ಯೆಯ ಹೋರಾಟ.

ಶ್ರೀರಾಮ ಪುರಾಣ ಪುರುಷನಿರಬಹುದು, ದೇಶದಲ್ಲಿ ಸಾವಿರಾರು ವರ್ಷಗಳಿಂದ ರಾಮನನ್ನು ಪೂಜಿಸಿದವರಿರಬಹುದು. ಆದರೆ ಈ ಅಯೋಧ್ಯೆಯ ಹೋರಾಟ ಪ್ರಾರಂಭವಾದ ಮೇಲೆ ಶ್ರೀ ರಾಮ ನಾಮ ಬಾಯಿಗೆ ಬಂದ ಹಾಗೆ ಹಿಂದೆಂದೂ ಬಂದಿರಲಿಲ್ಲ. 'ಜೈ ಶ್ರೀರಾಂ' ಘೋಷಣೆ ಅಷ್ಟರ ಮಟ್ಟಿಗೆ ಹಿಂದೆಂದೂ ಮೊಳಗಿರಲಿಲ್ಲ. ಅಲ್ಲಿಯವರೆಗೂ ದೇವಾಲಯಗಳಲ್ಲಿ, ಉತ್ಸವಗಳಲ್ಲಿ ವಿರಾಜಿಸುತ್ತಿದ್ದ ಶ್ರೀರಾಮ, ಅಯೋಧ್ಯೆ ಹೋರಾಟದ ನಂತರ ಪ್ರತೀ ಮನೆಯಲ್ಲೂ, ಪ್ರತಿಯೊಬ್ಬನ ಮನದಲ್ಲೂ ರಾರಾಜಿಸಲು ಪ್ರಾರಂಭವಾಗಿಬಿಟ್ಟ. ಶ್ರೀರಾಮನ ಕಾರ್ಯ ದೇಶದ ಕಾರ್ಯವಾಗಿದ್ದು ಅಯೋಧ್ಯೆಯ ಹೋರಾಟದ ಕಾಲದಿಂದಲೇ. ಇದೆಲ್ಲದರ ಜೊತೆಗೆ ಅಯೋಧ್ಯೆಯ ಹೋರಾಟ ದೇಶದ ಭಾವನಾತ್ಮಕ ಹೋರಾಟವಾಗಿ ರೂಪಿತಗೊಂಡಿತ್ತು. ಇದರ ನೇತೃತ್ವ ವಹಿಸಿದ ಕೊಂಡ ಸಂಘ ಪರಿವಾರಕ್ಕೆ ನಿರೀಕ್ಷೆಗೂ ಮಿಗಿಲಾದ ಸ್ಪಂದನೆ ಸಿಕ್ಕಿದ್ದು ಈ ಕಾರಣದಿಂದಲೇ. ಅಂದು ಪ್ರಾಣದ ಹಂಗು ತೊರೆದು ಹೋರಾಟದಲ್ಲಿ ಭಾಗವಹಿಸಿದವರಿಗೆ ನೇತೃತ್ವ ವಹಿಸಿದವರು ತಮ್ಮನ್ನು ತುರ್ತು ಸಂದರ್ಭಗಳಲ್ಲಿ ರಕ್ಷಿಸಬಹುದು ಅಥವಾ ರಕ್ಷಿಸಬೇಕು ಎಂಬ ನಿರೀಕ್ಷೆಯಿರಲಿಲ್ಲ. ಎದುರಾಗಬಹುದಾದ ಸಂಕಷ್ಟಗಳಿಗೆ ಸ್ಪಂದಿಸಬೇಕೆಂಬ ಆಕಾಂಕ್ಷೆಯೂ ಅವರಲ್ಲಿರಲಿಲ್ಲ. ದೇಶದ ಆಕ್ರಮಣವೊಂದರ ಸಂಕೇತವೊಂದರ ವಿನಾಶಕ್ಕೆ, ಮರ್ಯಾದಪುರುಷನ ಮಂದಿರ ನಿರ್ಮಾಣಕ್ಕೆ ಟೊಂಕಕಟ್ಟಿ ನಿಂತ ಇವರುಗಳ ಹೋರಾಟಕ್ಕೆ ಮನದಲ್ಲಿ ತುಂಬಿದ್ದ ಭಾವನೆಗಳದ್ದೇ ನೇತೃತ್ವ. ಈ ನೇತೃತ್ವದ ಹಿಂದೆ ಸಾಗಿದ ಈ ಹೋರಾಟಕ್ಕೆ ಅಂಕುಶ ಹಾಕಬಹುದಾದ ಸಾಮರ್ಥ್ಯ ಮತ್ತಾವ ನೇತೃತ್ವಕ್ಕೂ ಇರಲೇ ಇಲ್ಲ. ಅದಕ್ಕೇ ಅಂದು ಡಿಸೆಂಬರ್ 6 ರಂದು ಇಡೀ ಪರಿವಾರದ ನಾಯಕರ ಪರಪರಿ ಬೇಡಿಕೆಯೂ ವಿವಾದಾಸ್ಪದ ಕಟ್ಟಡವನ್ನು ಧರೆಗುರುಳುವುದನ್ನು ತಡೆಯಲಾಗಲಿಲ್ಲ. ನೆರೆದಿದ್ದ ಸಾವಿರಾರು ಪೋಲೀಸರು ಕರಸೇವಕರ ಕರಸೇವೆಯನ್ನು ನಿಯಂತ್ರಿಸಲಾಗಲಿಲ್ಲ. ಹೆಗಲಿಗೆ ಬಂದೂಕು ಹೇರಿಸಿಕೊಂಡು ನಿಂತಿದ್ದ ಸೈನಿಕರಿಗೂ ಕರಸೇವಕರ ನಿಯಂತ್ರಣ ಅಸಾಧ್ಯವಾಗಿ ಹೋಯಿತು. ಸರಕಾರ ಕೈಚೆಲ್ಲಿ ಕುಳಿತುಕೊಳ್ಳದೆ ಬೇರೆ ದಾರಿಯಿರಲೇ ಇಲ್ಲ.

ಅಯೋಧ್ಯೆಯ ಹೋರಾಟವನ್ನು ರೂಪಿಸಿದ ಪರಿವಾರದ ನಾಯಕತಕ್ಕೇ ಸೆಡ್ಡು ಹೊಡೆದು ನಿಂತ ಕರಸೇವಕರ ಹೋರಾಟದ ನೇತೃತ್ವವನ್ನು ಈ ಭಾವನೆ ಕಸಿದುಕೊಂಡು ಬಿಟ್ಟಿತ್ತು. ಕರಸೇವಕರ ಭಾವನೆಗಳ ಮುಂದೆ ತಮ್ಮದೇ ಸಾರಥ್ಯದಲ್ಲಿ ಅಯೋಧ್ಯೆಯವರೆಗೂ ಕರೆತಂದ ನಾಯಕತಕ್ಕೂ ಕರಸೇವಕರಿಂದ ಸೃಷ್ಟಿಯಾದ ಪರಿಸ್ಥಿತಿ ನಿಯಂತ್ರಿಸಲು ಆಗಲೇ ಇಲ್ಲ. ಶತಶತಮಾನಗಳಿಂದಲೂ ಅದುಮಿಟ್ಟುಕೊಂಡಿದ್ದ ಭಾವನೆಗಳು ಆಕ್ರೋಶವಾಗಿ ಪ್ರಕಟಗೊಂಡಿದ್ದನ್ನು ತಡೆಯಲಾಗಲೇ ಇಲ್ಲ.

ಶ್ರೀರಾಮನ ಕಾರ್ಯ ದೇಶದೇಕತೆಯ ಕಾರ್ಯವೆಂದು ಬೆಂಗಳೂರಿನ ರೈಲು ನಿಲ್ದಾಣದಲ್ಲಿ ಕರ್ನಾಟಕ ಎಕ್ಸ್‌ಪ್ರೆಸ್ ರೈಲನ್ನು ಹತ್ತಿದ ಅನೇಕರಿಗೆ ಬೆನ್ನ ಮೇಲೆ ಇದ್ದ ಬ್ಯಾಗಿನ ಭಾರಕ್ಕಿಂತ ತಲೆಯಲ್ಲಿ ತುಂಬಿದ್ದ ಭಾವನೆಯೇ ಅತಿ ಭಾರವೆನಿಸಿತ್ತು. ಆ ಭಾರವನ್ನು ಇಳಿಸಿಕೊಳ್ಳಲೇ ಬೇಕೆಂದು ಎಂದೋ ಸಂಕಲ್ಪ ತೊಟ್ಟಾಗಿತ್ತು. ಆ ಸಂಕಲ್ಪದ ಸಾಕಾರಕ್ಕೆ ಹೊರಟ ಈ ಕರಸೇವಕರಿಗೆ ತಂದೆ, ತಾಯಿ, ಅಣ್ಣ ತಮ್ಮ, ಕುಟುಂಬ ಎಲ್ಲವೂ ಗೌಣವೆನಿಸಿ ಬಿಟ್ಟಿತ್ತು. ತಂಡಗಳಲ್ಲಿದ್ದ 70 ವರ್ಷದ ತರುಣ ಕರಸೇವಕರಲ್ಲೂ ಉತ್ಸಾಹಕ್ಕೆ ಎಣೆಯಿರಲಿಲ್ಲ. ಅಲ್ಲಿ ಜೊತೆಯಲ್ಲಿದ್ದ ಕಿರಿಯರಿಗೆ ಹಿರಿಯರು ಹೇಳುತ್ತಿದ್ದ ಒಂದೇ ಮಾತು 'ಕರಸೇವೆ ಹೊರತು ಪಡಿಸಿ ಮಿಕ್ಕೆಲ್ಲವನ್ನು ಮರೆತು ಬಿಡಿ'.

ಡಿಸೆಂಬರ್ 6 ದೇಶದ ಇತಿಹಾಸ ಮರು ಸೃಷ್ಟಿಯಾದ ದಿನ. ಕಳಂಕಿತ ಕಟ್ಟಡವೊಂದು ಉರುಳಿಬಿದ್ದ ದಿನ. 18 ವರ್ಷದ ಈತನಿಗೆ ತಂದೆ ಸತ್ತು ಇನ್ನೂ ವರ್ಷವಾಗಿಲ್ಲ. ಮನೆಗೆ ಹಿರಿಯ ಮಗ. ಆದರೂ ಕರಸೇವೆಗೆ ಹೊರಡಲೇ ಬೇಕೆಂಬ ಇವನ ಭಾವನೆಗಳಿಗೆ ಕಡಿವಾಣ ಹಾಕಲು ಇವನ ತಾಯಿಗೂ ಸಾಧ್ಯವಾಗಲಿಲ್ಲ. ತಾಯಿಗಿಂತ ಮಿಗಿಲಾಗಿ ಅವನ ಕಣ್ಣ ಮುಂದೆ ಇದ್ದುದು ತಾಯಿ ಭಾರತಿಯನ್ನೇ ಅಣಕಿಸುತ್ತಿದ್ದ ಆ ಆಕ್ರಮಣದ ಸಂಕೇತ ಮಾತ್ರ. ತಾಯಿಯ ಆಗ್ರಹ,



ಕುಟುಂಬದ ಒತ್ತಾಸೆಗಳೆಲ್ಲವನ್ನೂ ಮೀರಿ ನಿಂತಿದ್ದು ಇವನ ಮನದಲ್ಲಿ ತುಂಬಿದ್ದ ಶ್ರೀರಾಮನ ಕಾರ್ಯಕ್ಕೆ ತೊಡಗಿಸಿಕೊಳ್ಳಲೇಬೇಕೆಂಬ ಭಾವನೆಯೇ.

ಡಿಸೆಂಬರ್ 6ಕ್ಕೆ ಒಂದು ವಾರ ಮುಂಚೆಯೇ ಅಯೋಧ್ಯೆ ತಲುಪಿದ್ದ ಅನೇಕರು ಅಯೋಧ್ಯೆಗೆ ಹೋದ ಮೇಲೆ ದಿನಕ್ಕೆ ಹತ್ತಾರು ಸಲ ವಿವಾದಿತ ಕಟ್ಟಡದ ಬಳಿ ಗಂಟೆಗಟ್ಟಲೆ ಕುಳಿತುಬಿಡುತ್ತಿದ್ದರು. ಬೆಳಗ್ಗೆ ಸರಯೂ ನದಿಯಲ್ಲಿ ಸ್ನಾನ ಬಿಟ್ಟರೆ ಇವರಿಗೆಲ್ಲಾ ಇದೊಂದೇ ಆಕರ್ಷಣೆ, ಇದೊಂದೇ ಸೆಳೆತ, ಒಂದೇ ಧ್ಯಾನ, ಜೈ ಶ್ರೀರಾಮ್ ಅನ್ನುವುದೊಂದೇ ಮಂತ್ರ. ನೂರಾರು ವರ್ಷಗಳ ಕಾಲ ತಮ್ಮನ್ನು ಅಣಕಿಸಿ ಸವಾಲೆಸೆಯುತ್ತಿದ್ದ ಕಳಂಕವೊಂದನ್ನು ತೊಡೆದು ಹಾಕುವ ಅವಕಾಶವೊಂದು ಒದಗಿ ಬಂದು ಬಿಟ್ಟಿದೆ. ಕರಸೇವೆಯ ನಂತರದ ದಿನಗಳಲ್ಲಿ ತುಂಬಾ ಪ್ರಚಾರವಾದ ಸಂಗತಿಯೆಂದರೆ ಕರಸೇವಕರ ಗುಂಪನ್ನು ನಿಯಂತ್ರಿಸುವ ಕೆಲಸವನ್ನು ಅಲ್ಲಿದ್ದ ಸಂಘ ಪರಿವಾರದ ಮುಖಂಡರು ಮಾಡಲಿಲ್ಲ ಎಂಬುದು.

ನಿಜ ಸಂಗತಿ ಏನೆಂದರೆ ಅಂದು ಅಲ್ಲಿ ನೆರೆದಿದ್ದ ಇಂತಹ ಲಕ್ಷಾಂತರ ಕರಸೇವಕರ ಮನಸ್ಸುಗಳಲ್ಲಿ ಹುಚ್ಚೆದ್ದು ಕುಣಿಯುತ್ತಿದ್ದ ಆವೇಶವನ್ನು ಕಟ್ಟಿಹಾಕುವ ಪ್ರಯತ್ನವು ಬಹುಷಃ ಸಾಕ್ಷಾತ್ ಶ್ರೀರಾಮನಿಂದಲೇ ಆಗುತ್ತಿರಲಿಲ್ಲವೇನೋ. ಅಲ್ಲಿ ಯಾರೋ ಒಬ್ಬ ನಾಯಕ ಇದ್ದಾನೆ, ಅವರ ಮಾತಿನಂತೆ ನಡೆಯಬೇಕು ಎಂದು ಇವರಾರಿಗೂ ಒಮ್ಮೆಯೂ ಅನ್ನಿಸಲಿಲ್ಲ. ಸಾವಿರಾರು ಮೈಲಿಗಳ ದೂರದ ಊರುಗಳಿಂದ ಅಲ್ಲಿಯವರೆಗೆ ಅವರೆಲ್ಲರನ್ನೂ ಸೆಳೆದು ತಂದಿದ್ದು ಆ ಭಾವವೇ. ಈ ಭಾವನೆಗಳ ವಶದಲ್ಲಿದ್ದ ಇವರುಗಳೆಲ್ಲರೂ ಸರಕಾರದ, ಸಂಘಟನೆಗಳ ಚೌಕಟ್ಟುಗಳಿಂದ ಮುಕ್ತರಾಗಿ ಬಿಟ್ಟಿದ್ದರು. ಕೈಯಲ್ಲಿ ಬಂದೂಕು ಹಿಡಿದು ಎದುರು ನಿಂತು ಕೆಕ್ಕರಿಸುತ್ತಿದ್ದ ಪೊಲೀಸ್‌ನ ಸಮೀಪಕ್ಕೆ ಹೋಗಿ 'ತಾಕತ್ತಿದ್ದರೆ ನನ್ನ ಎದೆಗೆ ಗುಂಡು ಹೊಡಿ' ಎಂದು ಅಬ್ಬರಿಸುವಷ್ಟರ ಮಟ್ಟಿಗೆ ಇವರನ್ನು ಶ್ರೀ ರಾಮ ಆವರಿಸಿಬಿಟ್ಟಿದ್ದ. ಸಂಜೆ ಫೈಜಾಬಾದ್ ಕಡೆಯಿಂದ ಬರುತ್ತಿದ್ದ ಮಿಲಿಟರಿ ವಾಹನಗಳು, ಮಿಲಿಟರಿ ಟ್ಯಾಂಕರಗಳು ಇವರನ್ನು ಅಧೀರರನ್ನಾಗಿಸಲಿಲ್ಲ. ಸಂಜೆ ಸರಯೂ ನದಿ ಕೆಂಪಾಗಿ ಹರಿಯುವ ಎಲ್ಲಾ ಸಾಧ್ಯತೆಗಳಿದ್ದರೂ ಇವರ ಹೋರಾಟದ ಕಾವು ಕಿಂಚಿತ್ತೂ ಕಡಿಮೆಯಾಗಲಿಲ್ಲ. ಜೈ ಶ್ರೀರಾಮ್ ಎಂದು ಕುಣಿಯುತ್ತಿದ್ದ ಸಾವಿರಾರು ಸಾಧುಗಳ ನಡುವೆ ಈ ಕರಸೇವಕರಿಂದ ಶ್ರೀರಾಮನ ಜನ್ಮಸ್ಥಳ ಮುಕ್ತವಾಗಿಯೇ ಬಿಟ್ಟಿತ್ತು. ಮನೆಯಲ್ಲಿದ್ದ ಇವರನ್ನು ಶ್ರೀರಾಮನ ಕಾರ್ಯಕ್ಕೆ ಕರೆತಂದವರ ನೇತೃತ್ವ ಕರಸೇವಕರ ಭಾವನೆಗಳಿಗೆ ಶರಣಾಗಿತ್ತು. ಅಲ್ಲಿಯ ತನಕ ಮನದಲ್ಲಿದ್ದ ಭಾವನೆಗಳನ್ನು ಬಡಿದೆಬ್ಬಿಸಿ ಹೋರಾಟಕ್ಕೆ ಕರೆತಂದ ನಾಯಕರುಗಳ ನೇತೃತ್ವವನ್ನು, ಸಾರಥ್ಯವನ್ನು ಈ ಭಾವನೆಯೆಂಬ ನೇತೃತ್ವ ಕಿತ್ತುಕೊಂಡು ಬಿಟ್ಟಿತ್ತು. ಕೋವಿಗಳನ್ನು ಹೆಗಲೇರಿಸಿಕೊಂಡು ಗುರಿ ಮಾಡಿಕೊಂಡು ನಿಂತಿದ್ದ ಪೋಲೀಸರ ಕೆಚ್ಚು ಕರಸೇವಕರ ಕೆಚ್ಚಿನ ಭಾವನಾತ್ಮಕ ಹೋರಾಟದ ಮುಂದೆ ಮಂಡಿಯೂರಿತ್ತು.

ಅಯೋಧ್ಯೆಯಲ್ಲಿ ದೇಶದ ಆಕ್ರಮಣದ ಸಂಕೇತ ಹೊತ್ತು ಅಣಕಿಸುತ್ತಿದ್ದ ಕಟ್ಟಡ ಕುಸಿದು ಬಿದ್ದ ಸಂಗತಿಯಲ್ಲಿ ಎಲ್ಲರಿಗೂ ಹರ್ಷವಿತ್ತು, ದೇಶದ ಬಹುಸಂಖ್ಯಾತರ ಭಾವನೆಗಳನ್ನು ನಿತ್ಯ ನಿರಂತರವಾಗಿ ಕಾಡುತ್ತಾ ಅಪಮಾನದ ಸಂಕೇತವಾಗಿದ್ದ ಕಟ್ಟಡ ಉರುಳಿಸಿದ, ಜೀವದ ಹಂಗು ತೊರೆದು ಕರಸೇವೆಯಲ್ಲಿ ಭಾಗವಹಿಸಿದ್ದ ಕಾರ್ಯಕರ್ತರ ಧೀರೋದ್ದಾತ್ತ ಕಾರ್ಯವನ್ನು ಬಹಿರಂಗವಾಗಿ ಸಮರ್ಥಿಸಿಕೊಳ್ಳಲಾರದ ಅಸಹಾಯಕತೆಯೂ ಇತ್ತು.

**ಇದು ಅಯೋಧ್ಯೆ ಹೋರಾಟ ನಡೆದು ಬಂದ ದಾರಿ:** ಇವೆಲ್ಲದರ ಪ್ರತಿಫಲ ಕಾನೂನಿನ ಚೌಕಟ್ಟಿನಲ್ಲೂ ಗೆಲುವು ಸಾಧಿಸಿ, ಮಂದಿರವಲ್ಲೆ ಕಟ್ಟುವೆವು ಎನ್ನುವ ಮಾತಿನಂತೆ ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣಗೊಂಡು 22 ಜನವರಿ 2024 ರಂದು ಲೋಕಾರ್ಪಣೆಯಾಗುತ್ತಿದೆ. ಕೋಟ್ಯಾಂತರ ಹಿಂದೂಗಳ ಭಾವನೆಗಳನ್ನು ಹೊತ್ತು ನಡೆದ ಈ ಹೋರಾಟದ ಅಡಿಪಾಯ ನಂಬಿಕೆ, ಅಸ್ತಿತ್ವ ಹಾಗೂ ಭಾವನೆಗಳದ್ದೇ. ಆದರೂ ಅದಕ್ಕೆ ಮೊದಲಿನಿಂದಲೂ ರೂಪುರೇಷೆಯನ್ನು ಕೊಟ್ಟು, ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯಲು ಮುಂದಾಳತ್ವ ವಹಿಸಿದ್ದು ಸಂಘ ಪರಿವಾರ ಮತ್ತು ಬಿಜೆಪಿ. ಅಯೋಧ್ಯೆ ರಾಮನದ್ದು ಅಲ್ಲಿ ನಾವು ರಾಮ ಮಂದಿರವನ್ನು ನಿರ್ಮಿಸಿಯೇ ಸಿದ್ದ ಎಂದು ಬಹುಸಂಖ್ಯಾತ ಹಿಂದುಗಳ ಭಾವನೆಗಳಿಗೆ ಉತ್ತರವಾಗಿ ಪಣ ತೊಟ್ಟಿದ್ದು ಇದೇ ಸಂಘ ಪರಿವಾರ ಮತ್ತು ಬಿಜೆಪಿ. ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲೂ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ನಮ್ಮ ಗುರಿ ಎಂದು ಭರವಸೆ ನೀಡಿ, ಅದನ್ನು ಸಾಧಿಸಿ ತೋರಿಸಿದೆ. ರಾಮ ಮಂದಿರ ಒಂದು ಅಸ್ಮಿತೆಯ ಮತ್ತು ಭಾರತೀಯತೆಯ ಸಂಕೇತ ಎಂದು ಹೇಳಿದ್ದು ಬಿಜೆಪಿ. ರಥ ಯಾತ್ರೆಯಿಂದ ಹಿಡಿದು, ಕರ ಸೇವಕರ ಮೇಲೆ ಗುಂಡು ಹಾರಿಸುವುದಿಲ್ಲಾ ಎಂದು ಆಗಿನ ಉತ್ತರಪ್ರದೇಶ ಬಿಜೆಪಿ ಮುಖ್ಯಮಂತ್ರಿಯ ಪದವಿಯನ್ನೇ ತ್ಯಾಗ ಮಾಡಿದ್ದು ಬಿಜೆಪಿ. ಕಾನೂನಿನ ಹೋರಾಟದಲ್ಲೂ ಬೇಕಾದ ಎಲ್ಲಾ ಪೂರಕ ವ್ಯವಸ್ಥೆ ಮಾಡಿದ್ದು ಬಿಜೆಪಿ ಮತ್ತು ಸಂಘ ಪರಿವಾರ. ಈ ಸಮಯಗಳಲ್ಲಿ ನಾಯಕತ್ವ ಬದಲಾಗಿರಬಹುದೇ

ಹೊರತು, ಬಿಜೆಪಿಯ ಮತ್ತು ಸಂಘ ಪರಿವಾರದ ನಿಲುವು, ಬದ್ಧತೆ, ನಿರ್ಧಾರ ಬದಲಾಗಿರಲಿಲ್ಲ. ಆರಂಭದಿಂದ, ತಾರ್ಕಿಕ ಅಂತ್ಯದವರೆಗೂ ಸ್ವಲ್ಪವೂ ವಿಚಲಿತಗೊಳ್ಳದೆ, ಹಿಂದಕ್ಕೆ ಹೆಜ್ಜೆ ಇಡದೆ ಮಂದಿರ ನಿರ್ಮಾಣವಾಗುವ ತನಕ ಬದ್ಧತೆಯನ್ನು ಪ್ರದರ್ಶಿಸಿದ್ದು ನೂರಕ್ಕೆ ನೂರು ಬಿಜೆಪಿ ಮತ್ತು ಸಂಘ ಪರಿವಾರದ ಮುಂದಾಳತ್ವವೇ. ಹೀಗಿರುವಾಗ ಇದರ ಲಾಭವನ್ನು ಬಿಜೆಪಿ ಪಡೆದುಕೊಳ್ಳುವಲ್ಲಿ ತಪ್ಪೇನಿದೆ?.

ರಾಮಮಂದಿರ ನಿರ್ಮಿಸಿ ಅದರ ಲಾಭ ಪಡೆದುಕೊಳ್ಳುವ ಅವಕಾಶ ಎಲ್ಲಾ ರಾಜಕೀಯ ಪಕ್ಷಗಳಿಗೂ ಇತ್ತು. ಆದರೆ ಅದನ್ನು ಮಾಡಲಿಲ್ಲ. ಈ ದೇಶವನ್ನು ಅತೀ ಹೆಚ್ಚು ವರ್ಷ ಆಳಿದ ನಮ್ಮ ಸಂಸ್ಕೃತಿ, ಕಲೆ, ಆಚಾರ, ವಿಚಾರಗಳನ್ನು ಉಳಿಸುವ ಬದಲು ಅಳಿಸುವ ಕೆಲಸವನ್ನೇ ಮಾಡಿತು. ರಾಮನ ಬಗ್ಗೆ ಪ್ರಶ್ನೆ ಮಾಡಿದರು, ರಾಮನ ಅಸ್ತಿತ್ವವನ್ನು ಪ್ರಶ್ನೆ ಮಾಡಿದರು, ತಥಾಕಥಿತ ಬುದ್ದಿಜೀವಿಗಳು ರಾಮನೇ ಸುಳ್ಳು ಎಂದರು. ರಾಮಮಂದಿರದ ಕಾನೂನು ಹೋರಾಟದಲ್ಲಿ ರಾಮಮಂದಿರ ನಿರ್ಮಾಣವಾಗ ಬಾರದೆಂದು ಕಾಂಗ್ರೆಸ್ ತನ್ನ ನಾಯಕ ಕಪಿಲ್ ಸಿಬಲ್ ನೇತೃತ್ವದಲ್ಲಿ 26 ಜನರ ವಕೀಲರ ತಂಡ ರಚಿಸಿಕೊಂಡು ವಿರೋಧ ಮಾಡಿತ್ತು. ಆ ಮೇಲೆ ರಾಮ ಮಂದಿರ ತೀರ್ಪು ಬಂದ ನಂತರ ಅಲ್ಲಿ ಮಂದಿರಕ್ಕಿಂತ ಆಸ್ಪತ್ರೆ ಕಟ್ಟಿಸಿ, ಶಾಲೆ ಕಟ್ಟಿಸಿ ಎಂದು ಲಾಜಿಕ್ಕೇ ಇಲ್ಲದ ವಾದವನ್ನು ಮಂಡಿಸಿದರು.

**ಇನ್ನು ಹೆಸರಿನಲ್ಲಿ ಮಾತ್ರ ರಾಮನಿರುವ, ನಡತೆಯಲ್ಲಿ ರಾವಣನಂತಿರುವ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರಂತು ಕೇಸರಿ ಪೇಟ ಆಗಿ ಬರುವುದಿಲ್ಲಾ, ಹಣೆಗೆ ಕುಂಕುಮ ಇಟ್ಟುಕೊಳ್ಳುವುದಿಲ್ಲಾ, ಹಿಂದು ದೇವರ ಗರ್ಭಗುಡಿಯೊಳಗೆ ಕಾಲಿಡುವುದಿಲ್ಲ ಎಂಬ ನಡತೆಯನ್ನು ಪ್ರದರ್ಶಿಸಿದರು. ಹಿಂದೂ ಸಂಸ್ಕೃತಿ, ಸಂಸ್ಕಾರ ಎಲ್ಲವನ್ನೂ ಅಲ್ಲಗಳೆದರು. ರಾಮಭಕ್ತರನ್ನೇ ಅಣಕಿಸಿದರು, ರಾಮಮಂದಿರಕ್ಕೆ ಒಂದು ಬಿಡಿಗಾಸೂ ದೇಣಿಗೆ ಕೊಡುವುದಿಲ್ಲವೆಂದರು. ಅನ್ಯ ಧರ್ಮಿಯರ ಆಚರಣೆಗಳನ್ನು ಬಿಗಿದಪ್ಪಿ ಕೊಂಡರು.**

**ಹೀಗೆ ಹಿಂದೂ ಧರ್ಮದ ಆಚಾರ, ವಿಚಾರ, ಸಂಸ್ಕೃತಿಗಳನ್ನು ತೆಗಳುತ್ತಾ, ತುಳಿಯುವುದೇ ತಮ್ಮ ಚಾಳಿಯಾಗಿಸಿಕೊಂಡ ಕಾಂಗ್ರೆಸ್ ನಾಯಕರು ಇಂದು ರಾಮ ಮಂದಿರ ಉದ್ಘಾಟನೆ ವಿಚಾರದಲ್ಲಿ ಮಾತುಗಳನ್ನಾರಂಭಿಸಿದ್ದಾರೆ. ಇದು ಬಿಜೆಪಿ ರಾಮ ಮಂದಿರ, ಬಿಜೆಪಿ ರಾಜಕೀಯ ಲಾಭ ಪಡೆಯುತ್ತಿದೆ, ರಾಮ ಮಂದಿರ ಎಲ್ಲರಿಗೂ ಸೇರಿದ್ದು, ನಮಗೆ ಕರೆಯೋಲೆ ಬಂದಿಲ್ಲಾ ಎಂಬೆಲ್ಲಾ ರಾಜಕೀಯ ಮಾತುಗಳನ್ನು ಪುಂಖಾನು ಪುಂಖವಾಗಿ ಹರಿದು ಬಿಡುತ್ತಿದ್ದಾರೆ. ಆಗ ಇಲ್ಲದ ಕಾಳಜಿ, ಬದ್ದತೆ ಈಗ ಇವರುಗಳಲ್ಲಿ ಆವರಿಸಿಕೊಳ್ಳುತ್ತಿದೆ. ಈಗ ರಾಮ ಬೇಕಾಗಿದ್ದಾನೆ. ಅಂದು ರಾಮನ ಅಸ್ತಿತ್ವವನ್ನು ಪ್ರಶ್ನಿಸಿದವರಿಗೆ, ರಾಮಭಕ್ತರ ಮೇಲೆಯೇ ಗುಂಡು ಹಾರಿಸಲು ಹೊರಟವರಿಗೆ, ಇಂದು ಶ್ರೀರಾಮ ತಮಗೂ ಸೇರಿದ್ದಾನೆ ಎನಿಸಿಬಿಟ್ಟಿದೆ, ಅಂದು ಅಸ್ತಿತ್ವದಲ್ಲೇ ಇಲ್ಲವೆನ್ನುತ್ತಿದ್ದ ರಾಮ ಇಂದು ಶ್ರೀರಾಮನಾಗಿ ಬಿಟ್ಟಿದ್ದಾನೆ. ರಾಜ್ಯ ಸರ್ಕಾರದ ಒಬ್ಬ ಸಚಿವರಂತೂ ತಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿನಲ್ಲೇ ರಾಮನಿದ್ದಾನೆ ಎನ್ನುತ್ತಾರೆ. ನಡೆತೆಯಲ್ಲಿಲ್ಲದ ರಾಮ ಹೆಸರಿನಲ್ಲಿದ್ದರೇನು?. ಆಂಜನೇಯನ ಹೆಸರನ್ನು ಇಟ್ಟುಕೊಂಡರೇನು?. ನಡೆಯಲ್ಲಿ, ನುಡಿಯಲ್ಲಿ, ಶ್ರೀ ರಾಮನಿದ್ದರೆ ಬೇಡವೆಂದರೂ ಅವನು ನಮ್ಮೊಡನೆಯೂ ಇರುತ್ತಾನೆ, ನಿಮ್ಮೊಡನೆಯೂ ಇರುತ್ತಾನೆ. ಅದಿಲ್ಲವೆಂದರೆ ಯಾರನ್ನು ಎಲ್ಲಿ ಇಡಬೇಕೆಂದು ಅವನೇ ನಿರ್ಧರಿಸಿ ಬಿಡುತ್ತಾನೆ. ಶ್ರೀ ರಾಮನ ಆರಾಧಕರನ್ನು ಎತ್ತರೆತ್ತರಕ್ಕೆ ಏರಿಸಿಯೇ ತೀರುತ್ತಾನೆ. ಇದಕ್ಕೆ ಇತಿಹಾಸಕ್ಕಿಂತ ಮತ್ತೊಂದು ಸಾಕ್ಷಿ ಬೇಡವೆಂದೆನಿಸುತ್ತದೆ.**

**ಇಂದೂ ಆದುಮಿಟ್ಟ ಭಾವನೆಗಳ ಪ್ರಕಟೀಕರಣವೇ:** ಭಾವನೆಗಳನ್ನು ಹೊತ್ತು ನಡೆದ ಈ ಹೋರಾಟದ ಬಗ್ಗೆ, ಜೀವದ ಹಂಗು ತೊರೆದು ಸಾಧಿಸಿದ ಈ ಸಾಧನೆಯ ಬಗ್ಗೆ, ಹಲವಾರು ಬಲಿದಾನಗಳಿಗೆ ಸಾಕ್ಷಿಯಾದ ಈ ಘಟನೆಯ ಬಗ್ಗೆ, ದೇಶದಲ್ಲಿ ವಿಶ್ವಗುರು ಭಾರತ ನಿರ್ಮಾಣಕ್ಕೆ ನಾಂದಿಯಾದ ದೇಶಕಾರ್ಯವಾದ ಈ ಶ್ರೀರಾಮನ ಕಾರ್ಯದ ಬಗ್ಗೆ, ಅಂದಿನ ಸರಸಂಘಚಾಲಕರಾಗಿದ್ದ ಮಾನನೀಯ ಶ್ರೀ ಬಾಳಾ ಸಾಹೇಬ್‌ದೇವರಸರು ಹೇಳಿಕೆಯೊಂದನ್ನು ನೀಡಿದರು. ಮಾಧ್ಯಮಗಳಲ್ಲಿ ಪುಟಗಟ್ಟಲೆ ವಿಶ್ಲೇಷಣೆ ಮಾಡಬಹುದಾದ, ಬಹುಸಂಖ್ಯಾತರ ಭಾವನೆಗಳೊಂದಿಗೆ ಚೆಲ್ಲಾಟವಾಡುವ ಶಕ್ತಿಗಳಿಗೆ ಸಂದೇಶವೊಂದನ್ನು ನೀಡುವ, ಪ್ರಾಣದ ಹಂಗು ತೊರೆದು ಹೋರಾಟ ಮಾಡಿದ ಕರಸೇವಕರ ಭಾವನೆಗಳನ್ನು ನೋಯಿಸದ, ಕಾನೂನು, ಸಂವಿಧಾನಾತ್ಮಕ ಸಂಗತಿಗಳೆಲ್ಲದರ ಇತಿಮಿತಿಯೊಳಗೆ ಸಣ್ಣದೊಂದು ಪ್ರತಿಕ್ರಿಯೆ ಇದಾಗಿತ್ತು. ಇಡೀ ಘಟನೆಯ ಬಗ್ಗೆ ಅವರು ನೀಡಿದ್ದ ಪ್ರತಿಕ್ರಿಯೆ ಬಹುಷಃ ಎಲ್ಲರಿಗೂ ಅನುಕರಣೀಯವಾಯಿತು. ಸೂಕ್ಷ್ಮ ಸಂದರ್ಭಗಳಲ್ಲಿ ನಾಯಕತ್ವದ ಪ್ರತಿಕ್ರಿಯೆ ಹೇಗಿರಬೇಕೆಂಬುದಕ್ಕೆ ಮಾದರಿಯಾಗಿತ್ತು. ಮಾನನೀಯ ಸರಸಂಘಚಾಲಕರು ಹೇಳಿದ್ದು ಇಷ್ಟೇ ಇಡೀ ಅಯೋಧ್ಯೆಯ ಘಟನೆ ದೇಶಭಕ್ತರ 'ಅದುಮಿಟ್ಟ ಭಾವನೆಗಳ ಪ್ರಕಟೀಕರಣ'. ಈ ಹೇಳಿಕೆಯ ಆಧಾರದಲ್ಲಿ ಅಂದಿನಿಂದ, ಇಂದಿನವರೆಗೂ ಸರಿ ತಪ್ಪುಗಳ ವಿಶ್ಲೇಷಣೆಯನ್ನು ಮಾಧ್ಯಮಗಳು ಮಾಡುತ್ತಲೇ ಇವೆ, ಮಾಡುತ್ತಲೇ ಇರುತ್ತವೆ. ಇಂದು ಇಡೀ ದೇಶದಲ್ಲಿ ಪುಟಿದೇಳುತ್ತಿರುವ ಅದಮ್ಯ ಉತ್ಸಾಹದಲ್ಲಿಯೂ ಅದೇ ಭಾವನೆಗಳೇ ಪ್ರಕಟವಾಗುತ್ತಿವೆ. ಆದರೆ ಅಂದು ಆಕ್ರೋಶದ ಕಣ್ಣು ಕೆಂಪಾಗುವ ಭಾವನೆಗಳು ಪ್ರಕಟವಾದರೆ ಇಂದು ಸಂತಸದ ಕಣ್ಣೀರು ಹರಿಯುವ ಭಾವನೆಗಳೇ ಪ್ರಕಟವಾಗುತ್ತಿವೆ.





# ಸೋಲನ್ನು ಸವಾಲಾಗಿ ಸ್ವೀಕರಿಸದ ಕಾಂಗ್ರೆಸ್



ಮಹೇಶ್ ಹೆಗಡೆ
ಕಾರ್ಯಕರ್ತರು

ತನ್ನ ಆಡಳಿತದಲ್ಲಿ ಸೈನಿಕರಿಗೆ ಬಟ್ಟೆಯನ್ನೆ ಸರಿಯಾಗಿ ವ್ಯವಸ್ಥೆ ಮಾಡಲಾಗದ ಕಾಂಗ್ರೆಸ್, ಈಗ ನಮ್ಮ ಸೈನಿಕರು ಮಾಡಿದ ಸರ್ಜಿಕಲ್ ಸ್ಟ್ರೈಕ್‌ನಂತ ಒಂದು ಅತ್ಯುನ್ನತವಾದ ಸೈನಿಕ ಕಾರ್ಯಾಚರಣೆಯಲ್ಲಿಯೂ ಅನುಮಾನಗಳನ್ನು ಪಟ್ಟು ಅಳುಕಿಲ್ಲದೆ, ಅಂಜದೆ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿದ ನಮ್ಮ ಸೈನಿಕರ ಸಾಧನೆಯ ಬಗ್ಗೆಯೇ ಸಂಶಯ ಪಟ್ಟು ಅವನ್ನು ಅಪಮಾನ ಮಾಡಿದರು. ದೇಶದ ಜನತೆ ಮಾತ್ರವಲ್ಲದೆ ಇಡೀ ವಿಶ್ವವೇ ನಮ್ಮ ಸೈನಿಕರ ಸಾಧನೆಯನ್ನು ಮೆಚ್ಚಿತ್ತು. ಆದರೆ ನಮ್ಮದೇ ದೇಶದ ಕಾಂಗ್ರೆಸ್ ಹಾಗೂ ಅವರ ಬೆಂಬಲಿಗರು, ಅವರ ಚೇಲಾಗಳು ಸರ್ಜಿಕಲ್ ಸ್ಟ್ರೈಕ್ ನಡೆದಿರುವ ಬಗ್ಗೆ ಸಾಕ್ಷಿ ನೀಡಿ ಎಂದು ಕೂತು ಬಿಟ್ಟರು.

ಒಂದು ಮಾತಿದೆ ಸೋಲು-ಗೆಲುವು ಮೊದಲೇ ಪಡೆದುಕೊಂಡು ಬಂದಿರುವುದಿಲ್ಲ. ನಮ್ಮ ಕೆಲಸಗಳು ಮತ್ತು ಶ್ರಮಗಳು ಅವುಗಳನ್ನು ನಿರ್ಧರಿಸುತ್ತವೆ. ಅದರಲ್ಲೂ ಒಂದು ರಾಜಕೀಯ ಪಕ್ಷ ಸೋಲನ್ನು ಸವಾಲಾಗಿ ಸ್ವೀಕರಿಸಿ ಮತ್ತೆ ಎದ್ದು ನಿಂತಾಗಲೆ ಅದಕ್ಕೊಂದು ಬೆಲೆ. ಅದಕ್ಕೆ ಉದಾಹರಣೆ ಬಿಜೆಪಿ. ಒಂದು ಸ್ಥಾನದಿಂದ ಇಂದು ಕೇಂದ್ರದಲ್ಲಿ ಮತ್ತು ಬಹುತೇಕ ರಾಜ್ಯಗಳಲ್ಲಿ ಬಿಜೆಪಿ ಆಡಳಿತದಲ್ಲಿದೆ. ಕಾರಣ, ಸೋತಾಗ ಕುಗ್ಗಲಿಲ್ಲಾ, ಭರವಸೆಗಳನ್ನಿಟ್ಟುಕೊಂಡು ಮುನ್ನುಗ್ಗಿತು. ತನ್ನ ಸೋಲಿಗೆ ಬೇರೆಯವರನ್ನು ದೂರಲಿಲ್ಲಾ. ಅದೆಲ್ಲದಕ್ಕಿಂತ ದೇಶದ ಅಸ್ಮಿತೆಯನ್ನು, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರಶ್ನೆ ಮಾಡಲಿಲ್ಲಾ. ತನ್ನೊಳಗಿನ ಸಂಘಟನೆಯನ್ನು ಹೇಗೆಲ್ಲಾ ಬಲಪಡಿಕೊಳ್ಳಬೇಕು ಎಂದು ಯೋಜಿಸಿ ಒಂದೊಂದೇ ಮೆಟ್ಟಿಲನ್ನು ಹತ್ತುತ್ತಾ ವಿಜಯದ ಪತಾಕೆ ಹಾರಿಸಿತು. ಎಂತಹ ಸೋಲು ಎದುರಾದರೂ ಬಿಜೆಪಿ ಎಲ್ಲೂ ತನ್ನ ದೇಶವನ್ನು ಕೀಳಾಗಿ ಕಾಣಲಿಲ್ಲಾ, ಹೀನ ರಾಜಕಾರಣ ಮಾಡಲಿಲ್ಲಾ, ಪ್ರಬುದ್ಧ ರಾಜಕಾರಣದ ಮೂಲಕ ಪ್ರಭುತ್ವವನ್ನು ಸಾಧಿಸಿತು.

ಆದರೆ ಈ ದೇಶವನ್ನು ಅತೀ ಹೆಚ್ಚು ವರ್ಷ ಆಳಿದ, ಈಗ ತನ್ನ ಅಸ್ತಿತ್ವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಕಾಂಗ್ರೆಸ್ ಮೊದಲಿನಿಂದಲೂ ಮಾಡಿದ್ದು ಹಾಗೂ ಈಗ ಮಾಡುತ್ತಿರುವುದು ಹೀನ ರಾಜಕಾರಣವೇ. ಕಾಂಗ್ರೆಸ್ ತನ್ನ ರಾಜಕಾರಣದಲ್ಲಿ ಪ್ರಭುದ್ದತೆಗಿಂತ ಸರ್ವಾಧಿಕಾರ, ಕುಟುಂಬ ರಾಜಕಾರಣ, ತುಳಿದು ಬೆಳೆಯುವ ರಾಜಕಾರಣ ಮಾಡಿದ್ದೇ ಹೆಚ್ಚು. ದೇಶದ ವಿಚಾರ ಬಂದಾಗ ರಾಜಕಾರಣವನ್ನು ಬಿಟ್ಟು ಒಂದಾಗಿ ನಿಲ್ಲಲಿಲ್ಲ. ದೇಶ ಗೆದ್ದಾಗ ಸಂಭ್ರಮಿಸಲಿಲ್ಲ, ಸೋತಾಗ ಸಾಂತ್ವನದಲ್ಲಿ ಜೊತೆಯಾಗಲಿಲ್ಲ, ಸೊತಾಗ ಕಾಂಗ್ರೆಸ್ ಕುಹಕವಾಡಿದ್ದೆ ಹೆಚ್ಚು.




ಅದು 1975 ಜೂನ್-25, ದೇಶದ ಅಂದಿನ ಪ್ರಧಾನಿ ದಿ. ಇಂದೀರಾ ಗಾಂಧಿಯವರು ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿ, ಕಾಂಗ್ರೆಸ್ ವಿರೋಧಿಗಳನ್ನು ಬಂಧಿಸಿ ಜೈಲಿನಲ್ಲಿಟ್ಟರು. ಮಾಧ್ಯಮಗಳ ಹಕ್ಕನ್ನು ಕಸಿದುಕೊಳ್ಳಲಾಯಿತು. ಒಟ್ಟಾರೆ ಪ್ರಜಾಪ್ರಭುತ್ವದ ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರಿ ದೇಶದ ಇತಿಹಾಸ ಪುಟವನ್ನು ಕಪ್ಪುಚುಕ್ಕೆಯನ್ನಾಗಿ ಮಾಡಿದರು. ಇದಕ್ಕೆ ಕಾರಣವಾಗಿದ್ದು ಇಂದಿರಾಗಾಂಧಿಯವರ ಸ್ವಾರ್ಥ, ಸರ್ವಾಧಿಕಾರದ ರಾಜಕಾರಣ. 1971ರ ಚುನಾವಣೆಯಲ್ಲಿ ಇಂದಿರಾಗಾಂಧಿಯವರ ಗೆಲುವನ್ನು ಅಸಿಂಧುಗೊಳಿಸಿ ನ್ಯಾಯಾಲಯ ತೀರ್ಪು ನೀಡಿತು. ಅವರ ಸಂಸದ ಸ್ಥಾನವನ್ನು ವಜಾಗೊಳಿಸಿತ್ತು. ಇದರಿಂದ ಕೋಪ ಗೊಂಡ ಇಂದಿರಾಗಾಂಧಿ ಅವರು ತನ್ನ ರಾಜಕಾರಣದ ಅಸ್ತಿತ್ವಕ್ಕಾಗಿ ದೇಶದ ಮಾನವನ್ನು ಹರಾಜು ಹಾಕಿ ತುರ್ತುಪರಿಸ್ಥಿತಿ ಘೋಷಿಸಿದರು. ದೇಶದ ಕಾನೂನಿಗೂ ಗೌರವ ಕೊಡದೆ, ಸೋಲನ್ನು ಸವಾಲಾಗಿ ಸ್ವೀಕರಿಸದೆ ತನ್ನ ಸ್ವಂತಕ್ಕಾಗಿ ಹೀನ ರಾಜಕಾರಣವನ್ನೇ ಮಾಡಿದರು.

ಹೀಗೆ ಮುಂದುವರೆದ ಅಪ್ರಬುದ್ಧತೆಯ ಕಾಂಗ್ರೆಸ್ ರಾಜಕಾರಣ 2014 ರ ನಂತರ ಅಂದರೆ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಆಡಳಿತ ಆರಂಭವಾದಾಗಿನಿಂದ ತರತರದಲ್ಲಿ ತುಚ್ಛ ರಾಜಕಾರಣವನ್ನು ಮಾಡಲಾರಂಭಿಸಿತು. ದೇಶ ಅಭಿವೃದ್ಧಿ ಹೊಂದುತ್ತಿರುವುದು, ದೇಶ ವಿಶ್ವಗುರು ಆಗುತ್ತಿರುವುದು, ದೇಶ ಸಂಸ್ಕೃತಿ, ಆಚಾರ ವಿಚಾರಗಳಿಗೆ ಸಿಗುತ್ತಿರುವ ಗೌರವವನ್ನು ಕಾಂಗ್ರೆಸ್‌ಗೆ ಸಹಿಸಿಕೊಳ್ಳುವ ಮನಃಸ್ಥಿತಿಯೇ ಇಲ್ಲವಾಗಿದೆ. ಸೋತು ಕಂಗೆಟ್ಟಿರುವ ಕಾಂಗ್ರೆಸ್, ಸೋಲಿಗೆ ಕಾರಣ ಹುಡುಕಿ ಆತ್ಮವಿಮರ್ಶೆ ಮಾಡಿಕೊಳ್ಳುವ ಬದಲು ಬಿಜೆಪಿ ಮತ್ತು ಪ್ರಧಾನಿ ಶ್ರೀ ನರೇಂದ್ರ ಮೋದಿಯನ್ನು ವಿರೋಧಿಸುವ ಭರದಲ್ಲಿ ದೇಶವನ್ನು ಕುಹಕವಾಡಿ ವಿಶ್ವಮಟ್ಟದಲ್ಲಿ ಕಳೆಗುಂದಿಸುವ ಕೆಲಸವನ್ನು ಪ್ರಾರಂಭಿಸಿತು.

ತನ್ನ ಆಡಳಿತದಲ್ಲಿ ಸೈನಿಕರಿಗೆ ಬಟ್ಟೆಯನ್ನೆ ಸರಿಯಾಗಿ ವ್ಯವಸ್ಥೆ ಮಾಡಲಾಗದ ಕಾಂಗ್ರೆಸ್, ಈಗ ನಮ್ಮ ಸೈನಿಕರು ಮಾಡಿದ ಸರ್ಜಿಕಲ್ ಸ್ಟ್ರೈಕ್‌ನಂತಹ ಅತ್ಯುನ್ನತವಾದ ಸೈನಿಕ ಕಾರ್ಯಾಚರಣೆಯಲ್ಲಿಯೂ ಅನುಮಾನಗಳನ್ನು ಪಟ್ಟು ಅಳುಕಿಲ್ಲದೆ, ಅಂಜದೆಯೇ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿದ ನಮ್ಮ ಸೈನಿಕರ ಸಾಧನೆಯ ಬಗ್ಗೆಯೇ ಸಂಶಯ ಪಟ್ಟು ಅವನ್ನು ಅಪಮಾನ ಮಾಡಿದರು. ದೇಶದ ಜನತೆ ಮಾತ್ರವಲ್ಲದೇ ಇಡೀ ವಿಶ್ವವೇ ನಮ್ಮ ಸೈನಿಕರ ಸಾಧನೆಯನ್ನು ಮೆಚ್ಚಿತ್ತು. ಆದರೆ ನಮ್ಮದೇ ದೇಶದ ಕಾಂಗ್ರೆಸ್ ಹಾಗೂ ಅವರ ಬೆಂಬಲಿಗರು, ಅವರ ಚೇಲಾಗಳು ಸರ್ಜಿಕಲ್ ಸ್ಟ್ರೈಕ್ ನಡೆದಿರುವ ಬಗ್ಗೆ ಸಾಕ್ಷಿ ನೀಡಿ ಎಂದು ಕೂತು ಬಿಟ್ಟರು. ಕಾಂಗ್ರೆಸ್‌ನ ಹೀನ ರಾಜಕಾರಣದ ಮನಃಸ್ಥಿತಿಗೆ ಇದಕ್ಕಿಂತ ಮತ್ತೊಂದು ಉದಾಹರಣೆ ಬೇಕಿಲ್ಲ.



ಮೊನ್ನೆ ಮೊನ್ನೆ ನಡೆದ ಚಳಿಗಾಲದ ಸಂಸತ್ ಅಧಿವೇಶನದಲ್ಲಿ ಈ ದೇಶದ ಬಗ್ಗೆ, ಕಾನೂನು, ಬಿಲ್‌ಗಳ ಬಗ್ಗೆ ಗಂಭೀರವಾಗಿ ಚರ್ಚಿಸಿ ಸರ್ಕಾರಕ್ಕೆ ಸಲಹೆ ನೀಡುವ ಬದಲು ಕಾಂಗ್ರೆಸ್ ಮತ್ತು ಅದರ ಮಿತ್ರ

ಪಕ್ಷಗಳ ಸಂಸದರು ಅಸಭ್ಯವಾಗಿ ವರ್ತಿಸಿದರು. ಈ ಕಾರಣದಿಂದ ಸ್ಪೀಕರ್ ರವರು ಅವರೆಲ್ಲರನ್ನೂ ಅವಮಾನತ್ತು ಗೊಳಿಸಿ ಆಚೆ ಕಳುಹಿಸಿದರೆ ಹೊರಗೆ ಬಂದು ಪ್ರತಿಭಟನೆ ನಡೆಸಿದರು. ದೇಶದ ಎರಡನೇ ಪ್ರಜೆಯಾದ ಉಪರಾಷ್ಟ್ರಪತಿ ಶ್ರೀ ಜಗದೀಪ್‌ಧನಕರ್ ಅವರನ್ನು ಅಣಕಿಸಿ ವ್ಯಂಗ್ಯವಾಡಿದರು. ಕಾಂಗ್ರೆಸ್ ನಾಯಕ ಶ್ರೀ ರಾಹುಲ್‌ಗಾಂಧಿ ತನ್ನ ಮೊಬೈಲ್‌ನಲ್ಲಿ ಇದನ್ನು ವಿಡಿಯೋ ಮಾಡುತ್ತಾ ತಮ್ಮ ಹೀನ ಮನಃಸ್ಥಿತಿಯ ಅನಾವರಣಕ್ಕೆ ಕಾರಣರಾದರು. ದೇಶ ಎರಡನೇ ಪ್ರಜೆಯ ಸ್ಥಾನಕ್ಕೆ ಗೌರವ ಕೊಡುವ ಬದಲು ಅವರನ್ನು ಅಣಕಿಸಿ ವ್ಯಂಗ್ಯವಾಡುವಂತಹ ನೀಚ ರಾಜಕಾರಣವನ್ನು ಪ್ರದರ್ಶಿಸಿದರು.

ವಿದೇಶಕ್ಕೆ ಹೋಗಿ ದೇಶ ವಿರುದ್ಧ ಭಾಷಣ ಮಾಡುವ ಕಾಂಗ್ರೆಸ್ ನಾಯಕ ಇಲ್ಲಿ 'ಭಾರತ್ ಜೋಡೊ ಯಾತ್ರೆ' ಮಾಡುತ್ತಾರೆ, ವಿದೇಶಗಳಲ್ಲಿನ ಭಾರತವನ್ನು ಒಡೆಯುವ ಹುನ್ನಾರ ಮಾಡುವವರ ಜೊತೆ ಕೈ ಜೋಡಿಸುತ್ತಾರೆ. ಇಡೀ ವಿಶ್ವವೇ ಭಾರತದ ಸಾಧನೆಯ ಬಗ್ಗೆ ಪ್ರಶಂಸೆಯ ಸುರಿಮಳೆಗೈಯುತ್ತಿದ್ದರೆ, ದೇಶದೊಳಗಿನ ಕಾಂಗ್ರೆಸ್ಸಿಗರು ಈ ಸಾಧನೆಗಳ ಬಗ್ಗೆಯೇ ಅನುಮಾನ ಪಡುತ್ತಾರೆ.

ಒಂದು ರಾಜಕೀಯ ಪಕ್ಷ ತನ್ನ ಸೋಲಿನ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇಟ್ಟಿರುವ ತಪ್ಪು ಹೆಜ್ಜೆಗಳನ್ನು ತಿದ್ದಿಕೊಳ್ಳಬೇಕು. ತನ್ನ ಹಿಂದಿನ ನಡೆಗಳೆಲ್ಲದರ ಬಗ್ಗೆ ವಿಮರ್ಶಿಸಿ, ಮತ್ತೆ ಗೆಲ್ಲುವುದು ಹೇಗೆ ಎಂದು ಯೋಚಿಸಿ ಮುನ್ನಡೆದು ಪ್ರಬುದ್ಧ ರಾಜಕಾರಣ ಮಾಡಬೇಕು. ಅದು ಬಿಟ್ಟು ಕ್ಷುಲ್ಲಕ ರಾಜಕಾರಣದ ಜಾಡು ಹಿಡಿದು ಹೊರಟಿರುವ ಕಾಂಗ್ರೆಸ್‌ನ ಇತ್ತೀಚೆಗಿನ ನಡೆಗಳು ಆ ಪಕ್ಷದ ನಾಯಕತ್ವ ಹತಾಶೆಯ ಹಂತ ತಲುಪಿರುವುದರ ದ್ಯೋತಕ ಎನ್ನಲೇ ಬೇಕು.

### ಪುಟ್ಟ ದೇಶವೊಂದರ ವಿರೋಧಪಕ್ಷದ ದೊಡ್ಡ ನಡೆ



ಇಸ್ರೇಲ್ ಮತ್ತು ಉಕ್ರೇನ್ ನಡುವೆ ಯುದ್ಧ ಆರಂಭವಾಯಿತು. ಇಸ್ರೇಲ್‌ನ ವಿರೋಧ ಪಕ್ಷದ ನಾಯಕ ರಾಜಕಾರಣ ಬಿಟ್ಟು ಇಸ್ರೇಲ್‌ನ ಆಡಳಿತ ಪಕ್ಷದ ಜೊತೆಗೆ ನಾವಿದ್ದೇವೆ ಎಂದು ಸ್ವತಃ ಸೇನಾ ಸಮವಸ್ತ್ರ ಧರಿಸಿ ಯುದ್ಧ ಭೂಮಿಗೆ ತೆರಳಿದರು. ಆತ ಯಾವುದಕ್ಕೂ ಸಾಕ್ಷಿ ಕೇಳಲಿಲ್ಲ. ಆಡಳಿತ ಪಕ್ಷದ ಬಗ್ಗೆ ಕುಹಕವಾಡಲಿಲ್ಲಾ. ಏಕೆಂದರೆ ಅವನಲ್ಲಿ ದೇಶಾಭಿಮಾನವಿತ್ತು. ತನ್ನ ದೇಶವನ್ನು ಉಳಿಸಿಕೊಳ್ಳಬೇಕೆಂಬ ಸಂಕಲ್ಪವಿತ್ತು. ಸ್ವಾರ್ಥದ ರಾಜಕಾರಣ ಅವನ ಬಳಿ ಸೋಂಕಲಿಲ್ಲ. ದೇಶದ ಉಳಿವಿಗಿಂತ ತನ್ನ ಪಕ್ಷದ, ಸ್ವಂತದ ರಾಜಕಾರಣ ದೊಡ್ಡದು ಎನಿಸಲಿಲ್ಲ. ಪುಟ್ಟ ದೇಶದ ವಿರೋಧ ಪಕ್ಷದ ಈ ದೊಡ್ಡ ನಡೆ, ದೊಡ್ಡ ದೇಶದ 75 ವರ್ಷ ಅಧಿಕಾರ ನಡೆಸಿದ ನಮ್ಮ ದೇಶದ ವಿರೋಧಪಕ್ಷಕ್ಕೆ ಮಾದರಿಯಾಗಲೇ ಇಲ್ಲ.

# ವೈಚಾರಿಕ ಉಪನ್ಯಾಸ ಕಾರ್ಯಕ್ರಮ – 'ಏಕಾತ್ಮತಾ ಸ್ತೋತ್ರ'

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಜಗನ್ನಾಥ ಭವನದ ಸಿಬ್ಬಂದಿ ವರ್ಗದವರಿಗೆ ಪ್ರತಿ ತಿಂಗಳ ಕೊನೆಯ ಮಂಗಳವಾರದಂದು ವೈಚಾರಿಕ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರು ಉತ್ತರ ವಿಭಾಗದ ಪ್ರಚಾರ ಪ್ರಮುಖರಾದ ಶ್ರೀ ನವೀನ್ ನಾಯಕ್ ಪೂ ರವರು 'ಏಕಾತ್ಮತಾ ಸ್ತೋತ್ರ' ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು.

ಪ್ರಾರ್ಥನೆ ಅಥವಾ ಪ್ರಾತಃಸ್ಮರಣೆ ಎಂಬುದು ಅನುಕರಣೆಯಾಗಿ ಅಲ್ಪ ಕಾಲಾವಧಿಗೆ ಸೀಮಿತವಾಗಿರದೆ ಧೀರ್ಘ ಕಾಲದ ಸದಾ ಮುಂದುವರೆಸಿಕೊಂಡು ಹೋಗಲು ಪ್ರೇರಣೆಯಾಗಬೇಕು ಎಂದು ತಿಳಿಸಿದರು. ರಾಷ್ಟ್ರಕಾರ್ಯದಲ್ಲಿ ತೊಡಗಿರುವ ನಾವೆಲ್ಲರೂ ನಮ್ಮ ಕಾರ್ಯ ಪದ್ಧತಿಯಲ್ಲಿ ಪ್ರಾರ್ಥನೆಯನ್ನು ಅಳವಡಿಸಿಕೊಂಡಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು. 'ಏಕಾತ್ಮತಾ ಸ್ತೋತ್ರ' ಎಂಬುದು ಒಂದು ಅದ್ಭುತವಾದ ರಚನೆ. ಮೊದಲ ಸಾಲಿನಲ್ಲಿ 'ಓಂ ಸಚ್ಚಿದಾನಂದ ರೂಪಾಯ ನಮೋಸ್ತು ಪರಮಾತ್ಮನೇ' ಎಂದು ಹೇಳುತ್ತೇವೆ. ಸತ್ – ಚಿತ್ – ಆನಂದ ಎಂದರೆ 'ಸತ್ಯ–ಪ್ರಜ್ಞೆ–ಆನಂದ'. ಈ ಎಲ್ಲಾ ಅಂಶವನ್ನು ನಾವು ಕಾಣುವುದು ಭಗವಂತನಲ್ಲಿ . ಇಲ್ಲಿ ನಾವು ಪರಮಾತ್ಮನನ್ನು ನಮಸ್ಕರಿಸುತ್ತೇವೆ. ಈ ಶ್ಲೋಕವನ್ನು ಒಂದು ಬಾರಿ ಓದಿದರೆ ಇಡೀ ಭಾರತ – ಅನಾದಿ ಕಾಲದಿಂದ ಇತ್ತೀಚಿನವರೆಗೆ, ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ – ಒಮ್ಮೆ ಕಣ್ಣ ಮುಂದೆ ಬರುತ್ತದೆ. ಇಲ್ಲಿನ ನದಿಗಳು, ಪರ್ವತಗಳು, ನಗರಗಳು, ಧರ್ಮಗ್ರಂಥಗಳು, ಮಹಾಪುರುಷರು, ರಾಜರುಗಳು, ಯೋಧರುಗಳು, ಋಷಿಮುನಿಗಳು, ಸಾಮಾಜಿಕ ಚಿಂತಕರು, ಸ್ವಾತಂತ್ರ್ಯ ಹೋರಾಟಗಾರರು ಎಲ್ಲರೂ ಕಣ್ಣ ಮುಂದೆ ಬರುತ್ತಾರೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಒಮ್ಮೆ ಭಾರತವನ್ನು ಸುತ್ತಿ ಬಂದಂತೆ ಅನಿಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಕಾರ್ಯಾಲಯ ನಿರ್ವಹಣಾ ಸಮಿತಿಯ ಸದಸ್ಯರು, ಮಾಹಿತಿ ವಿಭಾಗದ ಸದಸ್ಯರು ಹಾಗೂ ಜಗನ್ನಾಥ ಭವನದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.






# ಬ್ರಿಟಿಷರ ಕಾಲದ ಕಾನೂನಿಗೆ ವಿದಾಯ

ಬ್ರಿಟಿಷ್ ವಸಹತುಶಾಹಿ ಕಾಲದ ಅಪರಾಧ ನ್ಯಾಯ ವ್ಯವಸ್ಥೆಯನ್ನು ಕೂಲಂಕುಷವಾಗಿ ಪರಿಶೀಲಿಸುವ ಮೂರು ಪ್ರಮುಖ ಮಸೂದೆಗಳಿಗೆ ಲೋಕಸಭೆಯಲ್ಲಿ ಅಂಗೀಕಾರ ದೊರೆತಿದೆ. ಇದರೊಂದಿಗೆ ಅಪರಾಧ ಪ್ರಕರಣಗಳಲ್ಲಿ ಶಿಕ್ಷೆ ನೀಡುವ ಬದಲು ತ್ವರಿತ ನ್ಯಾಯ ಒದಗಿಸಲು ಗಮನಹರಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವ ಶ್ರೀ ಅಮಿತ್ ಶಾ ಹೇಳಿದ್ದಾರೆ.

ದೇಶದಲ್ಲಿ ಅಸ್ತಿತ್ವದಲ್ಲಿರುವ ಅಪರಾಧ ಕಾನೂನುಗಳನ್ನು ಪರಿಷ್ಕರಿಸುವ ಭಾರತೀಯ ನ್ಯಾಯಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಮಸೂದೆಗಳನ್ನು ಮಂಡಿಸಿದ ಗೃಹ ಸಚಿವ ಶ್ರೀ ಅಮಿತ್ ಶಾ, ಇದೇ ಮೊದಲ ಬಾರಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತೀಯರಿಗೆ 150 ವರ್ಷಗಳಿಗೂ ಹಳೆಯದಾದ ಬ್ರಿಟಿಷ್ ವಸಹತುಶಾಹಿ ನ್ಯಾಯ ವ್ಯವಸ್ಥೆ ಅಗಾಧ ಬದಲಾವಣೆ ತರಲಾಗುತ್ತಿದೆ ಎಂದು ತಿಳಿಸಿದರು.

ಪ್ರಸಕ್ತ ಕಾನೂನಿನಲ್ಲಿ ಕೇವಲ ಶಿಕ್ಷೆ ಕ್ರಮಗಳಿಗೆ ಮಾತ್ರ ಅವಕಾಶವಿದೆ. ಆದರೆ ಹೊಸ ಕಾನೂನುಗಳನ್ನು ಮಾನವೀಯತೆ ದೃಷ್ಟಿಯಿಂದ ಪರಿಷ್ಕರಿಸಲಾಗಿದೆ. ಅಲ್ಲದೆ, ಇವುಗಳನ್ನು ಸಂವಿಧಾನದ ಸ್ಫೂರ್ತಿಗೆ ಪೂರಕವಾಗಿ ರಚಿಸಲಾಗಿದೆ ಎಂದು ಗೃಹ ಸಚಿವರಾದ ಶ್ರೀ ಅಮಿತ್ ಶಾ ಹೇಳಿದರು. ಪ್ರಸ್ತುತ ಅಸ್ತಿತ್ವದಲ್ಲಿರುವ ಸಿಆರ್‌ಪಿಸಿ 1973 ಕಾಯ್ದೆಗೆ ಬದಲಾಗಿ ಭಾರತೀಯ ನಾಗರಿಕ ಸುರಕ್ಷಾ (ಎರಡನೇ) ಸಂಹಿತೆ 2023 ಮಸೂದೆಯನ್ನು ಭಾರತೀಯ ಸಾಕ್ಷ್ಯ ಕಾಯ್ದೆ 1872ರ ಬದಲಿಗೆ ಭಾರತೀಯ ಸಾಕ್ಷ್ಯ (ಎರಡನೇ) 2023 ಮಸೂದೆ ಹಾಗೂ ಐಪಿಸಿ 1860ರ ಬದಲುಗೆ ಭಾರತೀಯ ನ್ಯಾಯ (ಎರಡನೇ) ಸಂಹಿತೆ 2023 ಮಸೂದೆ ತರಲಾಗಿದೆ.

ಮಸೂದೆಗಳ ಕುರಿತ ಚರ್ಚೆಯ ವೇಳೆ ಶ್ರೀ ಅಮಿತ್ ಶಾ, ಮೂರು ಮಸೂದೆಗಳನ್ನು ಸಮಗ್ರವಾಗಿ ಸಮಾಲೋಚನೆ ನಡೆಸಿದ ನಂತರವೇ ರೂಪಿಸಲಾಗಿದೆ. ಹೊಸ ಮಸೂದೆಗಳು ಭಾರತೀಯ ಚಿಂತನೆಯ ಆಧಾರದ ಮೇಲೆ ನ್ಯಾಯ ವ್ಯವಸ್ಥೆ ಸ್ಥಾಪಿಸಲು ಪ್ರಯತ್ನಿಸುತ್ತವೆ ಎಂದು ಹೇಳಿದರು.

### ಭಯೋತ್ಪಾದಕತೆ ಸ್ಪಷ್ಟ ವ್ಯಾಖ್ಯಾನ

ಹೊಸ ಅಪರಾಧ ಕಾನೂನಿನಲ್ಲಿ ಭಯೋತ್ಪಾದಕತೆ ಮತ್ತು ದೇಶ ದ್ರೋಹ ಕುರಿತು ಸ್ಪಷ್ಟ ವ್ಯಾಖ್ಯಾನ. ರಾಷ್ಟ್ರದ ವಿರುದ್ಧ ಅಪರಾಧಗಳು ಎಂಬ ಹೊಸ ವಿಭಾಗದ ಶೀರ್ಷಿಕೆಯಲ್ಲಿ ವಿವರಣೆ.

158 ಸಭೆಗಳನ್ನು ನಡೆಸಿ ವೈಯಕ್ತಿಕವಾಗಿ ಪ್ರತಿಯೊಂದನ್ನು ವಿವರವಾಗಿ ಪರಿಶೀಲಿಸಿ, ಪ್ರತಿ ಅಲ್ಪವಿರಾಮ ಹಾಗೂ ಪೂರ್ಣ ವಿರಾಮದ ಗಮನ.

### ಗುಂಪು ಹತ್ಯೆಗೆ ಮರಣದಂಡನೆ

ಹೊಸ ಮಸೂದೆಯು ಸೆಕ್ಷನ್ 63ರಲ್ಲಿ ಅತ್ಯಾಚಾರ ಪ್ರಕರಣಗಳು ಒಳಪಡುತ್ತವೆ. ಇನ್ನು ಕೊಲೆ ಪ್ರಕರಣ ಸೆಕ್ಷನ್ 302ರ ಬದಲಿಗೆ ಸೆಕ್ಷನ್ 101, ಅಪಹರಣ ಪ್ರಕರಣ ಸೆಕ್ಷನ್ 359ರ ಬದಲಿಗೆ ಸೆಕ್ಷನ್ 136ರಲ್ಲಿ ಸೇರಿಸಲಾಗಿದೆ. ಮಸೂದೆಗಳು ಗುಂಪು ಹತ್ಯೆಗೆ ಮರಣದಂಡನೆ ಶಿಕ್ಷೆ ವಿಧಿಸಲಾಗಿದೆ.

ತ್ವರಿತ ನ್ಯಾಯಕ್ಕೆ ಒತ್ತು, ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಗಮನ.

### ದೇಶ ಉಳಿಸುವ ಉದ್ದೇಶ

ಹೊಸ ಕಾನೂನಿನ ಉದ್ದೇಶ ಸರ್ಕಾರ ಉಳಿಸುವುದಲ್ಲ. ಬದಲಿಗೆ ದೇಶ ಉಳಿಸುವುದಾಗಿದೆ. ಆರೋಗ್ಯಕರ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಸರ್ಕಾರ ಟೀಕಿಸುವ ಹಕ್ಕಿದೆ. ಹಾಗೆಂದ ಮಾತ್ರಕ್ಕೆ ಭಾರತದ ಬಗ್ಗೆ ಕೀಳಾಗಿ ಏನನ್ನೂ ಹೇಳಲು ಯಾರಿಗೂ ಅವಕಾಶ ನೀಡುವುದಿಲ್ಲ.

# ಎಡಬಿಡದ ಕಾರ್ಯಕ್ರಮಗಳು,
# ಸಜ್ಜುಗೊಳ್ಳುತ್ತಿರುವ ಸಂಘಟನೆ








**ಅಶ್ವಿನಿ ಶಂಕರ್**
ಸದಸ್ಯರು
ರಾಜ್ಯ ಪ್ರಕಾಶನ ಪ್ರಕೋಷ್ಠ

## ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಪ್ರವಾಸ

**ಪಕ್ಷ ಸಂಘಟನೆ ಹಾಗೂ ಬರಲಿರುವ ಲೋಕಸಭಾ ಚುನಾವಣಾ ದೃಷ್ಟಿಯಿಂದ ಸಂಘಟನೆಯನ್ನು ಸಜ್ಜುಗೊಳಿಸಲು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ.ವಿಜಯೇಂದ್ರರವರ ಪ್ರವಾಸ ಮುಂದುವರೆದಿದೆ. ಬೆಳಗಾವಿ, ದಾವಣಗೆರೆ, ಬಾಗಲಕೋಟೆ, ಮೈಸೂರು, ಚಾಮರಾಜನಗರ, ಗದಗ, ಬೆಂಗಳೂರು ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವ ಮೂಲಕ ಸಂಘಟನೆಯನ್ನು ಬರಲಿರುವ ಲೋಕಸಭಾ ಚುನಾವಣೆಗೆ ಸಜ್ಜುಗೊಳಿಸುತ್ತಿದ್ದಾರೆ.**



**ಬೆಳಗಾವಿ :** ಬೆಳಗಾವಿ ಜಿಲ್ಲೆಯ ಪ್ರವಾಸ ಮಾಡಿದ ಶ್ರೀ ಬಿ.ವೈ. ವಿಜಯೇಂದ್ರರವರು ಜಿಲ್ಲಾ ಕೇಂದ್ರದಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮಾತನಮಾಡಿ ಅಧಿಕಾರಕ್ಕೆ ಬಂದು 7 ತಿಂಗಳು ಕಳೆದರೂ ಅಭಿವೃದ್ಧಿ ಶೂನ್ಯ ಸ್ಥಿತಿ ತಂದೊಡ್ಡಿರುವ ಶ್ರೀ ಸಿದ್ದರಾಮಯ್ಯ ನೇತೃತ್ವದ ನಿಷ್ಕ್ರಿಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಕ್ಸಮರ ನಡೆಸಿದರು. ಕಿಸಾನ್ ಸಮ್ಮಾನ್ ನಿಧಿಯನ್ನು ಕೈಬಿಟ್ಟು ಎಸ್ಸಿ, ಎಸ್ಟಿ ಸಮುದಾಯಗಳ ಕಲ್ಯಾಣಕ್ಕೆಂದು ಮೀಸಲಿಟ್ಟಿದ್ದ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸಿಕೊಂಡಿರುವ ದಲಿತ ವಿರೋಧಿ ಮತ್ತು ರೈತ ವಿರೋಧಿ ನೀತಿಯನ್ನು ಖಂಡಿಸಿದರು.

ಕೇಂದ್ರೀಯ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪರವರು ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕೆ.ಎಸ್. ಈಶ್ವರಪ್ಪ, ಶ್ರೀ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಶ್ರೀ ಬಿ. ಶ್ರೀರಾಮುಲು ಹಾಗೂ ಅನೇಕ ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಬೆಳಗಾವಿ ನಗರ ಹಾಗೂ ಗ್ರಾಮಾಂತರ ಜಿಲ್ಲೆಯ ಪಕ್ಷದ ಕಾರ್ಯಾಲಯದ ಭೂಮಿ ಪೂಜೆಯಲ್ಲಿ ಪಾಲ್ಗೊಂಡು ಮಾತನಾಡುತ್ತ 'ಕಾರ್ಯಕರ್ತರಿಗೆ ಕಾರ್ಯಾಲಯವೇ ದೇವಸ್ಥಾನ' ಎಂದು ಹೇಳಿದರು. ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ಬೆಳಗಾವಿ ಗ್ರಾಮಾಂತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಸಂಜಯ್ ಪಾಟೀಲ್, ಬೆಳಗಾವಿ ನಗರ ಜಿಲ್ಲಾಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಶ್ರೀ ಅನಿಲ್ ಬೆನಕೆ, ಚಿಕ್ಕೋಡಿ ಜಿಲ್ಲಾಧ್ಯಕ್ಷರಾದ ಶ್ರೀ ರಾಜೇಶ್ ನೇರಳೆ, ಶಾಸಕರುಗಳಾದ ಶ್ರೀಮತಿ ಶಶಿಕಲಾ ಜೊಲ್ಲೆ, ಶ್ರೀ ಅಭಯ್ ಪಾಟೀಲ್, ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ಮಹಾಂತೇಶ್ ಕವಟಗಿಮಠ, ಶ್ರೀ ಶಂಕರೇಗೌಡ ಪಾಟೀಲ್, ರಾಜ್ಯ ವಕ್ತಾರರಾದ ಶ್ರೀ ಎಂ.ಬಿ. ಜಿರಲಿ, ಶ್ರೀ ಚಂದ್ರಶೇಖರ ಕವಟಗಿ ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನಿಡಸೋಸಿ ಮಠಕ್ಕೆ ಭೇಟಿ ನೀಡಿ, ದುರುದುಂಡೇಶ್ವರ ಮಠದ ಪರಮಪೂಜ್ಯ ಶ್ರೀ ಶಿವಲಿಂಗೇಶ್ವರ ಸ್ವಾಮೀಜಿಯವರ ಹಾಗೂ ಮಹಾರಾಷ್ಟ್ರದ ಕೊಲ್ಹಾಪುರದ ಕನೇರಿ ಮಠಕ್ಕೆ ತೆರಳಿ ಪೂಜ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳ ಆಶೀರ್ವಾದ ಪಡೆದರು.

ಬೆಳಗಾವಿ ತಾಲ್ಲೂಕು ವಂಟಮೂರಿ ಗ್ರಾಮದ ಪರಿಶಿಷ್ಟ ಪಂಗಡದ ಅಮಾಯಕ ಮಹಿಳೆಯನ್ನು ವಿವಸ್ತ್ರಗೊಳಿಸಿ ನಡೆದ ದೌರ್ಜನ್ಯವನ್ನು ಖಂಡಿಸಿ ಕಾಂಗ್ರೆಸ್ ಸರ್ಕಾರ ಮಹಿಳಾ ವಿರೋಧಿ ಧೋರಣೆಯ ವಿರುದ್ಧದ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

**ದಾವಣಗೆರೆ :** ದಾವಣಗೆರೆ ಜಿಲ್ಲಾ ಪ್ರವಾಸದ ವೇಳೆಯಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನದಲ್ಲಿ ಭಾಗವಹಿಸಿದರು.




ನಂತರ ದಾವಣಗೆರೆ ಜಿಲ್ಲಾ ಕಾರ್ಯಾಲಯಕ್ಕೆ ಭೇಟಿ ನೀಡಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು.

ದಾವಣಗೆರೆ ನಗರದ ಕೆ.ಬಿ. ಬಡಾವಣೆಯ ಮಹಿಳಾ ಸಮಾಜ ಬೂತ್ ಸಂಖ್ಯೆ 135ರ ಅಧ್ಯಕ್ಷರಾದ ಶ್ರೀ ಎಸ್. ಆನಂದ ಅವರ

ನಿವಾಸಕ್ಕೆ ಭೇಟಿ ನೀಡಿದರು. ದಾವಣಗೆರೆ ಜಿಲ್ಲೆಯ ಜಮಾಪುರ ಮುಖ್ಯರಸ್ತೆಯ ಆನಗೋಡಿನಲ್ಲಿ ತೀವ್ರ ಬರದಿಂದ ಸಂಪೂರ್ಣ ಬೆಳೆ ಹಾನಿಗೊಳಗಾಗಿರುವ ರೈತರ ಜಮೀನುಗಳಿಗೆ ಭೇಟಿ ನೀಡಿ ಸ್ಥಳ ಪರಿವೀಕ್ಷಣೆ ನಡೆಸಿ, ಸಂಕಷ್ಟದಲ್ಲಿರುವ ರೈತರಿಗೆ ಸಾಂತ್ವನ ಹೇಳಲಾಯಿತು. ಎಲ್ಲದಕ್ಕೂ ಕೇಂದ್ರದೆಡೆ ಬೆಟ್ಟು ತೋರಿಸಿ ಜನಹಿತ ಮರೆತಿರುವ ರಾಜ್ಯ ಸರ್ಕಾರವನ್ನು ಎಚ್ಚರಿಸಿ, ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.. ಈ ಸಂದರ್ಭದಲ್ಲಿ ಕೇಂದ್ರದ ಮಾಜಿ ಸಚಿವರು ಹಾಗೂ ಸಂಸದರಾದ ಶ್ರೀ ಜಿ.ಎಂ.ಸಿದ್ದೇಶ್ವರ್, ಮಾಜಿ ಸಚಿವರಾದ ಶ್ರೀ ಎಂ.ಪಿ.ರೇಣುಕಾಚಾರ್ಯ, ಶಾಸಕರಾದ ಶ್ರೀ ಬಿ.ಪಿ.ಹರೀಶ್, ಜಿಲ್ಲಾಧ್ಯಕ್ಷರಾದ ಶ್ರೀ ಹನಗವಾಡಿ ವೀರೇಶ್, ಮುಖಂಡರಾದ ಶ್ರೀ ಲೋಕಿಕೆರೆ ನಾಗರಾಜ್, ಶ್ರೀ ಜಿ.ಎಸ್.ಅನಿತ್ ಕುಮಾರ್, ಶ್ರೀ ಎಸ್.ಎ.ರವೀಂದ್ರನಾಥ್, ಶ್ರೀ ಲಿಂಗಣ್ಣ , ಶ್ರೀ ಬಸವರಾಜ ನಾಯ್ಕ್ ಅವರು, ಸೇರಿದಂತೆ ಪಕ್ಷದ ಮುಖಂಡರು, ಪದಾಽ ಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಗದಗ :** ಗದಗ ಪ್ರವಾಸದ ವೇಳೆಯಲ್ಲಿ ಪಕ್ಷದ ಜಿಲ್ಲಾ ಕಾರ್ಯಾಲಯಕ್ಕೆ ಭೇಟಿ ನೀಡಿದ್ದರು. ನಂತರ ಬಿಜೆಪಿ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ, ಮಾತನಾಡುತ್ತಾ ಮುಂದಿನ ಲೋಕಸಭಾ ಚುನಾವಣೆಯು ವಿಶ್ವ ಮಟ್ಟದಲ್ಲಿ ಭಾರತವನ್ನು ಮುಂಚೂಣಿಗೆ ತೆಗೆದುಕೊಂಡು ಹೋಗುವ ನಿಟ್ಟಿನಲ್ಲಿ ಮಹತ್ವದ್ದಾಗಿದೆ ಎಂದು ಹೇಳಿದರು.



ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಮಗದೊಮ್ಮೆ ಪ್ರಧಾನಿಯಾದರೆ ಮಾತ್ರ ದೇಶದ ಭವಿಷ್ಯ ಪ್ರಜ್ವಲಿಸಲು ಸಾಧ್ಯ, ಇದಕ್ಕಾಗಿ ರಾಜ್ಯದಲ್ಲಿ ಅತಿ ಹೆಚ್ಚು ಲೋಕಸಭಾ ಸ್ಥಾನಗಳನ್ನು ಬಿಜೆಪಿ ಗೆಲ್ಲುವ ಸಂಕಲ್ಪ ನಮ್ಮದಾಗಿದೆ. ಆದ್ದರಿಂದ ಕಾರ್ಯಕರ್ತರು ಸಂಪೂರ್ಣಾ ಮನೋಭಾವದಿಂದ ಇಂದಿನಿಂದಲೇ ಕಾರ್ಯೋನ್ಮುಖರಾಗಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಸದರಾದ ಶ್ರೀ ಗದ್ದಿಗೌಡರ್, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಸಿ.ಸಿ. ಪಾಟೀಲ್, ಶಾಸಕರಾದ ಡಾ. ಚಂದ್ರು ಲಮಾಣಿ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ವಿ. ಸಂಕನೂರ, ಮಾಜಿ ಶಾಸಕರಾದ ಶ್ರೀ ಕಳಕಪ್ಪ ಬಂಡಿ, ವಿಭಾಗ ಪ್ರಭಾರಿಗಳಾದ ಶ್ರೀ ಲಿಂಗರಾಜ ಪಾಟೀಲ್, ಜಿಲ್ಲಾಧ್ಯಕ್ಷರಾದ ಶ್ರೀ ಲಿಂಗಣ್ಣ ಲಿಂಗನಗೌಡರು, ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರ ರವರು 'ನಮ್ಮ ನಡೆ – ಬೂತಿನ ಕಡೆ' ಅಭಿಯಾನದಡಿಯಲ್ಲಿ ಗದಗ ವಿಧಾನಸಭಾ ಕ್ಷೇತ್ರದ ಬೂತ್ ಸಂಖ್ಯೆ 59 ರ ಅಧ್ಯಕ್ಷರಾದ ಶ್ರೀ ಮಹಾಂತೇಶ ಕಾತರಕಿ ಅವರ ನಿವಾಸಕ್ಕೆ ಭೇಟಿ ನೀಡಿದರು.

**ಬೆಂಗಳೂರು :** ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರ ರವರು ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಾಡಪ್ರಭು ಕೆಂಪೇಗೌಡ ಜನಪರ ವೇದಿಕೆಯ ಸಹಯೋಗದಲ್ಲಿ ಮಾಜಿ ಉಪಮುಖ್ಯಮಂತ್ರಿಗಳು ಹಾಗೂ ಶಾಸಕರಾದ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ 'ಸುಶಾಸನ್ ದಿವಸ್' ಕಾರ್ಯಕ್ರಮದಲ್ಲಿ ಭಾಗವಹಿಸಿ, ದೇಶ ಕಂಡ ಅತ್ಯುತ್ತಮ ನಾಯಕ ಮಾಜಿ ಪ್ರಧಾನಿ ದಿ. ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮಸ್ಮರಣೆಯ ಸಂದರ್ಭದಲ್ಲಿ ಸದೃಢ ಹಾಗೂ ಸಮೃದ್ಧ ಭಾರತ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಶ್ರೇಷ್ಠ ವ್ಯಕ್ತಿತ್ವವನ್ನು ಸ್ಮರಿಸಿದರು.




ಈ ಕಾರ್ಯಕ್ರಮದಲ್ಲಿ ಮಾಜಿ ಉಪಮುಖ್ಯಮಂತ್ರಿಗಳಾದ ಡಾ.ಸಿ.ಎನ್. ಅಶ್ವಥ್ ನಾರಾಯಣ್, ಶಿಕ್ಷಣ ಫೌಂಡೇಶನ್‌ನ ಶ್ರೀ ವಿ.ಆರ್. ಪ್ರಸನ್ನ, ಬುಲ್ ಫೋರ್ಸ್ ಮತ್ತು ವರ್ಚುವಲ್ ಟೆಕ್ ಹೆಲ್ತ್ ಕ್ಲಿನಿಕ್‌ಗಳ ಸಹ-ಸಂಸ್ಥಾಪಕರಾದ ಶ್ರೀ ಸುಬ್ರಹ್ಮಣ್ಯ ಬಸವನಹಳ್ಳಿ ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು, ಚಿಂತಕರು ಉಪಸ್ಥಿತರಿದ್ದರು.

ನಂತರ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಬಸವನಗುಡಿಯ ಗವಿಪುರ ಗೋಸಾಯಿ ಮಹಾಸಂಸ್ಥಾನ ಮಠಕ್ಕೆ ಭೇಟಿ ನೀಡಿ ಪೀಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಮಂಜುನಾಥ ಸ್ವಾಮಿಜೀಗಳ ಆಶೀರ್ವಾದವನ್ನು ಪಡೆದರು.

ಸಂದರ್ಭದಲ್ಲಿ ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿ, ಮುಖಂಡರಾದ ಶ್ರೀ ಉಮೇಶ್ ಶೆಟ್ಟಿ ಹಾಗೂ ಅನೇಕ ಮುಖಂಡರು ಉಪಸ್ಥಿತರಿದ್ದರು.



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಆಯೋಜಿಸಿದ್ದ 'ವೀರ ಬಾಲ ದಿವಸ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರೀತಮ್ ಗೌಡ, ವಿಧಾನಸಭೆಯ ವಿರೋಧ ಪಕ್ಷದ ನೂತನ ಮುಖ್ಯ ಸಚೇತಕರಾದ ಶ್ರೀ ದೊಡ್ಡನಗೌಡ ಹೆಚ್. ಪಾಟೀಲ್, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೆರೆ, ಕಾರ್ಯಾಲಯ ಕಾರ್ಯದರ್ಶಿ ಶ್ರೀ ಲೋಕೇಶ್ ಅಂಬೇಕಲ್ ಹಾಗೂ ಪಕ್ಷದ ಮುಖಂಡರು ಭಾಗಿಯಾಗಿದ್ದರು.




ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮವನ್ನು ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರ ರವರು ಉದ್ಘಾಟಿಸಿ ಮಾತನಾಡಿ, ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಉದ್ದೇಶವೇ ಬಡವರ ಸಬಲೀಕರಣ ಎಂದು ಹೇಳಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಬಿ.ಎ. ಬಸವರಾಜು, ಒಬಿಸಿ ಮೋರ್ಚಾದ ರಾಜ್ಯಾಧ್ಯಕ್ಷರಾದ ಶ್ರೀ ಆರ್. ರಘು ಕೌಟಿಲ್ಯ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರಾದ ಶ್ರೀ ಬಿ. ನಾರಾಯಣ ಗೌಡ, ಮಹಿಳಾ ಮೋರ್ಚಾ ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಶ್ರೀಮತಿ ಗೀತಾ ವಿವೇಕಾನಂದ, ಶ್ರೀ ಸಚ್ಚಿದಾನಂದ ಮೂರ್ತಿ, ಮಂಡಲ ಅಧ್ಯಕ್ಷರಾದ ಶ್ರೀ ಶಿವರಾಜ್ ಅವರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರ ರವರು ಗಾಂಧಿನಗರ ವಿಧಾನಸಭಾ ಕ್ಷೇತ್ರದ ಮುನೇಶ್ವರ ಬ್ಲಾಕ್ ಬಳಿ ಆಯೋಜಿಸಿದ್ದ 'ವಿಕಸಿತ ಭಾರತ ಸಂಕಲ್ಪ ಯಾತ್ರೆ' ಕಾರ್ಯಕ್ರಮದಲ್ಲಿ ಸಂಸದರಾದ ಶ್ರೀ ಪಿ.ಸಿ. ಮೋಹನ್, ಮುಖಂಡರಾದ ಶ್ರೀ ಸಪ್ತಗಿರಿ ಗೌಡ, ಮಂಡಲ ಅಧ್ಯಕ್ಷರಾದ ಶ್ರೀ ಸೈತಾನ್ ಸಿಂಗ್, ಸ್ಥಳೀಯ ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪಕ್ಷದ ಹಿರಿಯ ನಾಯಕರುಗಳೊಂದಿಗೆ ಆಯೋಜಿಸಿದ್ದ ವಿಶೇಷ ಸಭೆಯಲ್ಲಿ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪ, ವಿರೋಧ ಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ವಿಧಾನ ಪರಿಷತ್ತಿನ ವಿರೋಧ ಪಕ್ಷ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ನಿಕಟಪೂರ್ವ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಕೇಂದ್ರ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡ, ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಕೆ.ಎಸ್. ಈಶ್ವರಪ್ಪ, ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ, ಮಾಜಿ ಸಚಿವರಾದ ಶ್ರೀ ಶ್ರೀರಾಮುಲು, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್ ಅವರು ಸೇರಿದಂತೆ ಪ್ರಮುಖ ನಾಯಕರು ಉಪಸ್ಥಿತರಿದ್ದರು.



ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ವತಿಯಿಂದ ಜಯನಗರದಲ್ಲಿ ಆಯೋಜಿಸಿದ್ದ ಪೂರ್ಣ ಪ್ರಮಾಣದ ಸಭೆಯಲ್ಲಿ ಭಾಗವಹಿಸಿದ್ದರು. ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಾಜೇಶ್ ಜೀ ಅವರು, ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷರಾದ ಶ್ರೀ ಎನ್.ಆರ್.ರಮೇಶ್, ವಿಭಾಗ ಪ್ರಭಾರಿಗಳು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋಪಿನಾಥ್ ರೆಡ್ಡಿ, ಸಹ ಪ್ರಭಾರಿ ಶ್ರೀ ರಾಜಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿ ಸುದರ್ಶನ್, ಶ್ರೀ ದೀಪಕ್ ಸೇರಿದಂತೆ ಪಕ್ಷದ ಪದಾಽಕಾರಿಗಳು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಬಿಜೆಪಿ ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಹೆಮ್ಮೆಯ ಮೋದಿಜೀ ಅವರನ್ನು ಮಗದೊಮ್ಮೆ ಪ್ರಧಾನಿ ಮಾಡುವ ಸಂಕಲ್ಪ ಈಡೇರಿಕೆಗೆ ಪಕ್ಷದ ಎಲ್ಲ ಕಾರ್ಯಕರ್ತರು ಹಗಲಿರುಳೆನ್ನದೇ ಶ್ರಮಿಸಬೇಕೆಂಬ ಕರೆ ನೀಡಲಾಯಿತು. ಈ ಸಂದರ್ಭದಲ್ಲಿ ವಿಧಾನ ಸಭಾ ವಿರೋಧ ಪಕ್ಷ ನಾಯಕರಾದ ಶ್ರೀ ಆರ್.ಅಶೋಕ್, ಸಂಸದರಾದ ಶ್ರೀ ಪಿ.ಸಿ.ಮೋಹನ್, ರಾಜ್ಯಸಭಾ ಸದಸ್ಯರಾದ ಶ್ರೀ ಲೇಹರ್ ಸಿಂಗ್, ಜಿಲ್ಲಾಧ್ಯಕ್ಷರಾದ ಶ್ರೀ ಬಿ ನಾರಾಯಣ್, ಶ್ರೀ ಸಿ ಮುನಿಕೃಷ್ಣ ಅವರು ಸೇರಿದಂತೆ ಪಕ್ಷದ ಪದಾಽ ಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಸರಕಾರದ ವಿರುದ್ಧದ ಪ್ರತಿಭಟನಾ ಸಭೆಯಲ್ಲಿ ರಾಮಭಕ್ತರನ್ನು ಕೆಣಕಿದರೆ ಕಾಂಗ್ರೆಸ್ ಸರ್ಕಾರ ಧೂಳಿಪಟವಾದೀತು ಎಚ್ಚರ ದೇಶದ ಜನರ 5 ದಶಕಗಳ ಕನಸು ನನಸಾಗುತ್ತಿರುವ ಪವಿತ್ರ ರಾಮಮಂದಿರ ಉದ್ಘಾಟನೆಯ



ಸಂಭ್ರಮದಲ್ಲಿರುವ ಹೊತ್ತಿನಲ್ಲಿ ಹುಬ್ಬಳ್ಳಿಯಲ್ಲಿ ರಾಮ ಮಂದಿರ ನಿರ್ಮಾಣ ಹೋರಾಟದಲ್ಲಿ ಭಾಗಿಯಾಗಿದ್ದ, 31 ವರ್ಷದ ಹಳೆಯ ಪ್ರಕರಣಗಳನ್ನು ಕೆದಕಿ ಶ್ರೀಕಾಂತ್ ಪೂಜಾರಿ ಸೇರಿದಂತೆ ರಾಮ ಭಕ್ತರನ್ನು ಬಂಽಸಿರುವ ಕ್ರಮವನ್ನು ಖಂಡಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಜಿ ಬಿಬಿಎಂಪಿ ಸದಸ್ಯರುಗಳ ಸಭೆಯಲ್ಲಿ, ರಾಜ್ಯ ಬಿಜೆಪಿಯ ಮಾಧ್ಯಮ ಮುಖ್ಯ ವಕ್ತಾರರು - ವಕ್ತಾರರು, ಸಾಮಾಜಿಕ ಜಾಲತಾಣ ಸಂಚಾಲಕರು - ಸಹ ಸಂಚಾಲಕರು, ಮಾಹಿತಿ ತಂತ್ರಜ್ಞಾನ ವಿಭಾಗದ ಸಂಚಾಲಕರು - ಸಹ ಸಂಚಾಲಕರು ಹಾಗೂ ಮಾಧ್ಯಮ ವಿಭಾಗದ ಸಂಚಾಲಕರು - ಸಹ ಸಂಚಾಲಕರ ಸಭೆಯಲ್ಲಿಯೂ ಭಾಗಿಯಾಗಿದ್ದರು.



ಜಗನ್ನಾಥ ಭವನದಲ್ಲಿ ಆಯೋಜಿಸಿದ್ದ ಭೀಮ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು ಸ್ವಾತಂತ್ರ್ಯಾ ನಂತರದಿಂದಲೂ ಅಽಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಎಂದಿಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಗೌರವಿಸಿಲ್ಲ, ಅವರನ್ನು ಚುನಾವಣೆಯಲ್ಲಿ ಸೋಲಿಸಲು ಹರಸಾಹಸ ಪಟ್ಟಿತ್ತು. ಅಂಬೇಡ್ಕರ್‌ಅವರನ್ನು ಸ್ಮರಿಸುವ ಎಲ್ಲ ಸ್ಥಳಗಳನ್ನು ತೀರ್ಥ ಕ್ಷೇತ್ರವನ್ನಾಗಿಸಿ ಅಭಿವೃದ್ಧಿ ಪಡಿಸಿ ಅವರಿಗೆ ಅತ್ಯುನ್ನತ ಗೌರವ ನೀಡಿದ್ದು ಮೋದಿ ಜೀ ಅವರ ನೇತೃತ್ವದ ಬಿಜೆಪಿ ಸರ್ಕಾರ ಎಂದು ನುಡಿದರು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪ, ಎಸ್.ಸಿ.ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಸಿಮೆಂಟ್ ಮಂಜು, ಸಂಸದರಾದ ಶ್ರೀ ಮುನಿಸ್ವಾಮಿ, ಮಾಜಿ ಶಾಸಕರುಗಳಾದ ಶ್ರೀ ಸಂಪಂಗಿ, ಶ್ರೀ ವೆಂಕಟ ಮುನಿಯಪ್ಪ, ಮುಖಂಡರಾದ ಶ್ರೀ ಸಿ.ಮುನಿಕೃಷ್ಣ, ಶ್ರೀ ಚಿ.ನಾ.ರಾಮು, ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ಎಸ್.ಸಿ.ಮೋರ್ಚಾ ಪದಾಽ ಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಬೆಂಗಳೂರಿನ ಶೇಷಾದ್ರಿಪುರಂ ನಲ್ಲಿರುವ ಕೋಡಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಅಯೋಧ್ಯೆಯಿಂದ ಬಂದಿರುವ ಶ್ರೀರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆಯ ಮಂತ್ರಾಕ್ಷತೆಗೆ ಪೂಜೆ ಸಲ್ಲಿಸಿ, ಮನೆ ಮನೆಗೆ ತೆರಳಿ ಪವಿತ್ರ ಮಂತ್ರಾಕ್ಷತೆ ವಿತರಿಸಲಾಯಿತು. ಪ್ರಧಾನಿ ಮೋದಿ ಜೀ ಅವರ ಕರೆಯ ಮೇರೆಗೆ ಜನವರಿ 22 ರಂದು ಮನೆಗಳಲ್ಲಿ ರಾಮಜ್ಯೋತಿ ಬೆಳಗಲು ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ನಗರ ಜಿಲ್ಲಾಧ್ಯಕ್ಷರಾದ ಶ್ರೀ ಮಂಜುನಾಥ್, ಮುಖಂಡರಾದ ಶ್ರೀ ಸಪ್ತಗಿರಿ ಗೌಡ, ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಚಾಮರಾಜನಗರ :** ಚಾಮರಾಜನಗರ ಜಿಲ್ಲಾ ಪ್ರವಾಸದ ಹಿನ್ನಲೆಯಲ್ಲಿ ಇಂದು ಪುರಾತನ ಪ್ರಸಿದ್ಧ, ದಕ್ಷಿಣ ಕಾಶಿ ನಂಜನಗೂಡಿನ ಶ್ರೀ ನಂಜುಂಡೇಶ್ವರ ಸ್ವಾಮಿಯ ದರ್ಶನ ಪಡೆದರು. ಚಾಮರಾಜನಗರದಲ್ಲಿ ಆಯೋಜಿಸಿದ್ದ ಪಕ್ಷದ ಕಾರ್ಯಕರ್ತರ ಬೃಹತ್ ಸಭೆಯಲ್ಲಿ ಭಾಗವಹಿಸಿ ಮಾತನಾಡಿ ವಿಶ್ವ ಮಟ್ಟದಲ್ಲಿ ಭಾರತವನ್ನು ಅಗ್ರ ಸ್ಥಾನದೊಂದಿಗೆ ಮುನ್ನಡೆಸುತ್ತಿರುವ ಹೆಮ್ಮೆಯ ಪ್ರಧಾನಿ ಮೋದಿಜೀ ಅವರು ದೇಶದ ಭರವಸೆಯ ಗ್ಯಾರಂಟಿಯಾಗಿದ್ದಾರೆ, ಮಗದೊಮ್ಮೆ ಅವರನ್ನು ಪ್ರಧಾನಿ ಪಟ್ಟಕ್ಕೇರಿಸಿ ದೇಶದ ಭವಿಷ್ಯ ಪ್ರಜ್ವಲಿಸುವಂತೆ ಮಾಡಲು ಕಾರ್ಯಕರ್ತರು ಸಮರ್ಪಣಾ ಮನೋಭಾವದಿಂದ ಯೋಧರಂತೆ ಇಂದಿನಿಂದಲೇ ಕಾರ್ಯೋನ್ಮುಖರಾಗಬೇಕೆಂಬ ಕರೆ ನೀಡಿದರು.

ಮಾಜಿ ಸಚಿವರು ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಶ್ರೀ ಎನ್.ಮಹೇಶ್, ಮಾಜಿ ಶಾಸಕರುಗಳಾದ ಶ್ರೀ ನಿರಂಜನ್ ಕುಮಾರ್, ಶ್ರೀ ಎಸ್.ಬಾಲರಾಜು, ಒಬಿಸಿ ಮೋರ್ಚಾದ ರಾಜ್ಯ ಅಧ್ಯಕ್ಷರಾದ ಶ್ರೀ ಆರ್.ರಘು ಕೌಟಿಲ್ಯ, ಜಿಲ್ಲಾಧ್ಯಕ್ಷರಾದ ಶ್ರೀ ನಾರಾಯಣ್ ಪ್ರಸಾದ್, ನಿವೃತ್ತ ಐಎಎಸ್ ಅಧಿಕಾರಿ ಶ್ರೀ ಕೆ.ಶಿವರಾಂ, ಮುಖಂಡರಾದ ಶ್ರೀ ರಾಮಚಂದ್ರು, ಶ್ರೀ ಕೋಟೆ ಶಿವಣ್ಣನವರು, ಶ್ರೀ ಎಸ್.ಮಹದೇವಯ್ಯ, ಶ್ರೀ ನೂರೊಂದು ಶೆಟ್ಟಿ ಅವರು ಸೇರಿದಂತೆ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ 25, ಬೂತ್ ನಂಬರ್ 43 ರ ಅಧ್ಯಕ್ಷರಾದ ಶ್ರೀ ಪಿ. ಮಾದೇವ ಅವರ ನಿವಾಸಕ್ಕೆ ಭೇಟಿ ನೀಡಿದರು.

**ಮೈಸೂರು :** ಮೈಸೂರಿನ ಪಕ್ಷದ ಜಿಲ್ಲಾ ಕಾರ್ಯಾಲಯದಲ್ಲಿ ಆಯೋಜಿಸಿದ್ದ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ 5 ದಶಕಗಳ ಕೋಟ್ಯಂತರ ಭಾರತೀಯರ ಕನಸು ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆಯಾಗುತ್ತಿರುವ ಹೊತ್ತಿನಲ್ಲಿ ಎಲ್ಲಾ ದೇವಾಲಯಗಳಲ್ಲಿ ಸ್ವಚ್ಛತಾ ಕಾರ್ಯ ನೆರವೇರಿಸುವುದರ ಜತೆಗೆ 22 ರಂದು ಮನೆ ಮನೆಗಳಲ್ಲಿ ರಾಮಜ್ಯೋತಿ ಬೆಳಗಿಸಲು ವಿನಂತಿಸಿದರು.




ವಿಶ್ವಕರ್ಮ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್ ಎ ರಾಮದಾಸ್, ರಾಜ್ಯ ಉಪಾಧ್ಯಕ್ಷರಾದ ಶ್ರೀ ಎನ್.ಮಹೇಶ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರೀತಮ್ ಗೌಡ, ನಗರ ಜಿಲ್ಲಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಟಿ.ಎಂ. ಶ್ರೀವತ್ಸ, ಗ್ರಾಮಾಂತರ ಜಿಲ್ಲಾಧ್ಯಕ್ಷರಾದ ಶ್ರೀಮತಿ ಮಂಗಳಾ ಸೋಮಶೇಖರ್ ಮಾಜಿ ಶಾಸಕರಾದ ಶ್ರೀ ನಾಗೇಂದ್ರ, ಮಾಜಿ ರಾಜ್ಯ ಪ್ರಧಾನ



ಕಾರ್ಯದರ್ಶಿಗಳಾದ ಶ್ರೀ ಸಿದ್ದರಾಜು, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೆರೆ ಅವರು ಸೇರಿದಂತೆ ಪಕ್ಷದ ಮುಖಂಡರು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ವಿಜಯಪುರ :** ಗುರುಪರಂಪರೆಯ ಶ್ರದ್ಧಾಕೇಂದ್ರವಾಗಿರುವ ಜಿಲ್ಲೆಯ ಬಬಲೇಶ್ವರ ಶ್ರೀ ಗುರುಪಾದೇಶ್ವರ ಬೃಹನ್ಮಠಕ್ಕೆ ಭೇಟಿ ನೀಡಿ ಪೂಜ್ಯ ಶ್ರೀ ಷ.ಬ್ರ.ಮಹಾದೇವ ಶಿವಾಚಾರ್ಯ ಮಹಾಸ್ವಾಮಿಗಳ ಆಶೀರ್ವಾದ ಪಡೆದರು.



ವಿಜಯಪುರದಲ್ಲಿ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ವಿಜಯಪುರ ಜಿಲ್ಲೆಯು ಪಕ್ಷದ ಸುಭದ್ರ ಕೋಟೆಯಾಗಿದ್ದು, ಮುಂಬರುವ ದಿನಗಳಲ್ಲಿ ಲೋಕಸಮರ ಗೆಲ್ಲುವ ಮೂಲಕ ಹೆಮ್ಮೆಯ ಪ್ರಧಾನಿ ಶ್ರೀ ಮೋದಿಯವರನ್ನು ಮಗದೊಮ್ಮೆ ಪ್ರಧಾನಿಯಾಗಿಸಲು ಎಲ್ಲರೂ ಹಗಲಿರುಳೆನ್ನದೇ ಶ್ರಮಿಸಬೇಕೆಂಬ ಕರೆ ನೀಡಿದರು.

ವಿಜಯಪುರದ ಜ್ಞಾನ ಯೋಗಾಶ್ರಮದಲ್ಲಿಂದು ಪೂಜ್ಯ ಸಿದ್ದೇಶ್ವರ ಶ್ರೀಗಳ ಎರಡನೇ ವರ್ಷದ ಪುಣ್ಯಸ್ಮರಣೆಯ ಗುರುನಮನ ಮಹೋತ್ಸವದ ಉದ್ಘಾಟನೆ ನೆರವೇರಿಸಿ ಶ್ರೇಷ್ಠ ಸಂತರ ಆಶೀರ್ವಾದ ಪಡೆದರು.



ವಿಜಯಪುರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂಬರ್ 6, ಕೆ.ಹೆಚ್.ಬಿ ಕಾಲೊನಿಯ ಬೂತ್ ಸಂಖ್ಯೆ 01 ರ ಅಧ್ಯಕ್ಷರಾದ ಶ್ರೀ ಉದಯ್ ಕನ್ನಳ್ಳಿ ಅವರ ನಿವಾಸಕ್ಕೆ ಭೇಟಿ ನೀಡಲಾಯಿತು. ಕೇಂದ್ರದ ಮಾಜಿ ಸಚಿವರು ಹಾಗೂ ಸಂಸದರಾದ ಶ್ರೀ ರಮೇಶ್ ಜಿಗಜಿಣಗಿ, ರಾಜ್ಯ ಉಪಾಧ್ಯಕ್ಷರು ಹಾಗೂ ಮಾಜಿ ಸಚಿವರಾದ ಶ್ರೀ ಮುರುಗೇಶ್ ನಿರಾಣಿ, ಬಿಜೆಪಿ ರೈತ ಮೋರ್ಚಾ ನೂತನ ರಾಜ್ಯಾಧ್ಯಕ್ಷರಾದ ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ, ಮಾಜಿ ಸಚಿವರಾದ ಶ್ರೀ ಎಸ್ ಕೆ ಬೆಳ್ಳುಬ್ಬಿ, ಜಿಲ್ಲಾಧ್ಯಕ್ಷರಾದ ಶ್ರೀ ಆರ್.ಎಸ್. ಪಾಟೀಲ್ ಕುಚಬಾಳ, ಮಾಜಿ ಶಾಸಕರುಗಳಾದ ಶ್ರೀ ರಮೇಶ್ ಭೂಸನೂರ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅರುಣ್ ಶಹಾಪುರ್, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೆರೆ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

**ಬೆಂಗಳೂರು :** ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ರಾಜ್ಯ ಬಿಜೆಪಿ ರೈತ ಮೋರ್ಚಾ ನೂತನ ರಾಜ್ಯಾಧ್ಯಕ್ಷರ ಪದಗ್ರಹಣ ಸಮಾರಂಭವನ್ನು ಆಯೋಜಿಸಲಾಗಿತ್ತು.



ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಮಾತನಾಡಿ ರೈತ ಮೋರ್ಚಾವು ಸಂಘಟನೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಸಂಘಟಿಸಿ ಪಕ್ಷಕ್ಕೆ ಬಲ ತುಂಬುವ ನಿಟ್ಟಿನಲ್ಲಿ ಯಶಸ್ಸು ದೊರೆಯಲೆಂದು ಹೇಳಿದರು. ರೈತ ಮೋರ್ಚಾದ ನೂತನ ರಾಜ್ಯಾಧ್ಯಕ್ಷರಾದ ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿಅವರಿಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಪ್ರಧಾನಕಾರ್ಯದರ್ಶಿ ಶ್ರೀ ಜಿ.ವಿ. ರಾಜೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ರಾಜೀವ್, ರೈತ ಮೋರ್ಚಾ ನಿಕಟಪೂರ್ವ ರಾಜ್ಯಾಧ್ಯಕ್ಷರು ಹಾಗೂ ರಾಜ್ಯ ಸಭಾ ಸದಸ್ಯರಾದ ಶ್ರೀ ಈರಣ್ಣ ಕಡಾಡಿ, ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷರಾದ ಕು. ಸಿ. ಮಂಜುಳ, ರೈತ ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಮುಂಬರುವ ಲೋಕಸಭಾ ಚುನಾವಣಾ ತಯಾರಿಯ ನಿಟ್ಟಿನಲ್ಲಿ ಯಲಹಂಕದಲ್ಲಿ ಲೋಕಸಭಾ ಚುನಾವಣಾ ಯೋಜನಾ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಮುಂಬರುವ ಲೋಕಸಭಾ ಚುನಾವಣೆಯ

ಕುರಿತು ಅನುಸರಿಸಬೇಕಾದ ಕಾರ್ಯತಂತ್ರಗಳು ಹಾಗೂ ಸಂಘಟನಾತ್ಮಕ ಯೋಜನೆಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಈ ಸಂದರ್ಭದಲ್ಲಿ ಕೇಂದ್ರೀಯ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಬಿಜೆಪಿ ಉಸ್ತುವಾರಿಗಳಾದ ಶ್ರೀ ಅರುಣ್ ಸಿಂಗ್, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಡಿ.ವಿ. ಸದಾನಂದಗೌಡ, ವಿರೋಧಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ವಿಧಾನಪರಿಷತ್ ವಿಪಕ್ಷ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಪ್ರಮುಖ ನಾಯಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಆಯೋಜಿಸಿದ್ದ ರಾಜ್ಯ ಮಾಧ್ಯಮ ಕಾರ್ಯಾಗಾರದಲ್ಲಿ ಭಾಗವಹಿಸಿದ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ ಲೋಕಸಮರದಲ್ಲಿ ಪ್ರಚಂಡ ವಿಜಯ ಸಾಧಿಸುವ ನಿಟ್ಟಿನಲ್ಲಿ ಅನುಸರಿಸಬೇಕಾದ ಕ್ರಮಗಳು ಹಾಗೂ ಪಕ್ಷದ ಪರವಾಗಿ ಜನಾಭಿಪ್ರಾಯ ಮೂಡಿಸಲು ಕೈಗೊಳ್ಳಬೇಕಾಗಿರುವ ಕಾರ್ಯಯೋಜನೆಗಳ ಕುರಿತು ಚರ್ಚೆ ನಡೆಸಿದರು.




ಈ ಸಂದರ್ಭದಲ್ಲಿ ರಾಷ್ಟ್ರೀಯ ವಕ್ತಾರರಾದ ಶ್ರೀ ಜಾಫರ್ ಇಸ್ಲಾಂ, ಶ್ರೀ ತೂಹಿನ್ ಸಿನ್ಹಾ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ರಾಜೀವ್, ರಾಜ್ಯ ಮುಖ್ಯ ವಕ್ತಾರರಾದ ಶ್ರೀ ಅಶ್ವತ್ಥನಾರಾಯಣ, ಮಾಧ್ಯಮ ವಿಭಾಗದ ನೂತನ ಪದಾಧಿಕಾರಿಗಳು ಹಾಗೂ ಪಕ್ಷದ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಆಯೋಜಿಸಿದ್ದ ಎಸ್‌ಟಿ ಮೋರ್ಚಾ ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭಾಗವಹಿಸಿ ಎಸ್‌ಟಿ ಮೋರ್ಚಾ ಸಂಘಟನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಸಂಘಟಿಸಿ ಪಕ್ಷಕ್ಕೆ ಬಲ ತುಂಬುವ ನಿಟ್ಟಿನಲ್ಲಿ ಯಶಸ್ಸು ದೊರೆಯಲೆಂದು ರಾಜ್ಯ ಬಿಜೆಪಿ ಎಸ್.ಟಿ. ಮೋರ್ಚಾದ ನೂತನ ಅಧ್ಯಕ್ಷರಾದ ಶ್ರೀ ಬಂಗಾರು ಹನುಮಂತು ಅವರಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸುನೀಲ್ ಕಾರ್ಕಳ, ಎಸ್.ಟಿ. ಮೋರ್ಚಾ ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಶ್ರೀ ತಿಪ್ಪರಾಜು ಹವಾಲ್ದಾರ್, ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.




ರಾಜ್ಯ ಬಿಜೆಪಿ ವತಿಯಿಂದ ಬೆಂಗಳೂರಿನಲ್ಲಿ ಮುಂಬರುವ 2024ರ ಲೋಕಸಭಾ ಚುನಾವಣಾ ತಯಾರಿಗಾಗಿ 'ಸುಭದ್ರ ಭಾರತಕ್ಕಾಗಿ ಲೋಕಸಮರದ ವಿಜಯ ಸಂಕಲ್ಪ' - ಕ್ಷೇತ್ರವಾರು ಸಿದ್ಧತಾ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿ






ಮಾತನಾಡಿ ಸುಭದ್ರ, ಸಮೃದ್ಧ ಹಾಗೂ ಸುರಕ್ಷಿತ ಭಾರತವನ್ನು ಕಟ್ಟುತ್ತಾ ಅಭಿವೃದ್ಧಿ ಪಥದ ಗ್ಯಾರಂಟಿಯಾಗಿರುವ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಜನತೆಯ ನಿರೀಕ್ಷೆಯಂತೆ ಮುಂಬರುವ ಲೋಕಸಭಾ ಚುನಾವನೆಯಲ್ಲಿ ಅಭೂತಪೂರ್ವ ಜಯ ಗಳಿಸಿ ಮಗದೊಮ್ಮೆ ಪ್ರಧಾನಿಯಾಗಬೇಕಿದೆ, ಈ ನಿಟ್ಟಿನಲ್ಲಿ ಲೋಕಸಮರದಲ್ಲಿ ಬಹುದೊಡ್ಡ ವಿಜಯ ಸಾಧಿಸಲು ಕೈಗೊಳ್ಳಬೇಕಾಗಿರುವ ಸಂಘಟನಾತ್ಮಕ ಕಾರ್ಯ ಯೋಜನೆಗಳ ಕುರಿತು ಹಿರಿಯ ನಾಯಕರೆಲ್ಲರು ಚರ್ಚಿಸಿ ಎಲ್ಲರೂ ಒಗ್ಗಟ್ಟಿನಿಂದ ಈ ನಿಟ್ಟಿನಲ್ಲಿ ಶ್ರಮಿಸಬೇಕೆಂಬ ಸಂಕಲ್ಪ ಮಾಡಲಾಯಿತು.

ಈ ಸಂದರ್ಭದಲ್ಲಿ ಕೇಂದ್ರೀಯ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿಯ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಮಾಜಿ ಕೇಂದ್ರ ಸಚಿವರು ಹಾಗೂ ಸಂಸದರಾದ ಶ್ರೀ ಡಿ.ವಿ. ಸದಾನಂದ ಗೌಡ, ವಿಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ, ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಶಾಸಕರಾದ ಡಾ. ಅಶ್ವತ್ಥನಾರಾಯಣ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸುನೀಲ್ ಕಾರ್ಕಳ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ಸಂಸದರು, ಶಾಸಕರು, ಜಿಲ್ಲಾವಾರು ಪ್ರಮುಖರು ಹಾಗೂ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ರಾಜ್ಯ ಬಿಜೆಪಿ ವತಿಯಿಂದ ಮುಂಬರುವ ಲೋಕಸಭಾ ಚುನಾವಣಾ ತಯಾರಿಯಾಗಿ ಸಂಘಟನೆಯನ್ನು ಬಲಗೊಳಿಸಲು ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ವಿಭಾಗ, ಮೈಸೂರು ವಿಭಾಗ ಹಾಗೂ ತುಮಕೂರು ವಿಭಾಗಗಳ ಲೋಕಸಭಾ ಕ್ಷೇತ್ರಾವರು ಸಿದ್ಧತಾ ಸಭೆಯನ್ನು ಆಯೋಜಿಸಲಾಗಿತ್ತು.

ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಹಾಗೂ ಹಿರಿಯ ನಾಯಕರು ಸಭೆಯನ್ನುದ ಉದ್ಘಾಟಿಸಿದರು. ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ಮಗದೊಮ್ಮೆ ಅಧಿಕಾರಕ್ಕೆ ಬರಲು ರಾಜ್ಯದ ಎಲ್ಲಾ ಸ್ಥಾನಗಳಲ್ಲಿ ಬಹುದೊಡ್ಡ ಅಂತರದಿಂದ ವಿಜಯ ಸಾಧಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾಗಿರುವ ಸಂಘಟನಾತ್ಮಕ ಕಾರ್ಯತಂತ್ರಗಳ ಕುರಿತು ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಕೇಂದ್ರೀಯ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿಯ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಮಾಜಿ ಕೇಂದ್ರ ಸಚಿವರು ಹಾಗೂ ಸಂಸದರಾದ ಶ್ರೀ ಡಿ.ವಿ. ಸದಾನಂದ ಗೌಡ, ವಿಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ, ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಶಾಸಕರಾದ ಡಾ. ಅಶ್ವತ್ಥನಾರಾಯಣ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸುನೀಲ್ ಕಾರ್ಕಳ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ಸಂಸದರು, ಶಾಸಕರು, ಜಿಲ್ಲಾವಾರು ಪ್ರಮುಖರು ಹಾಗೂ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಚರ್ಚೆಗೊಂದು ಸಾಲು...

### ಕರಸೇವಕರ ಬಂಧನ, ಕಾಂಗ್ರೆಸ್ ನ ಹತಾಶ ಸ್ಥಿತಿಯ ಅನಾವರಣ

## ‘ಮಾಸದ ಮಾಧುರ್ಯ’ 81ನೇ ಕಾರ್ಯಕ್ರಮದಲ್ಲಿ

# ಭರತನಾಟ್ಯ, ಕಥಕ್, ವಿಶೇಷ ಪ್ರಾಚೀನ ಸಮರಕಲೆ ಕಲರಿಪಯಟ್ಟು



ತಿಂಗಳಿಗೆ ಒಂದೇ ಕಾರ್ಯಕ್ರಮವಾದರೂ ತನ್ನ ಮಾಧುರ್ಯದಿಂದ ಕಲಾಭಿಮಾನಿಗಳ ಹೃದಯದಲ್ಲಿ ಮಾಸದೇ ಇರುವ ನೆನಪಾಗಿ ಯಶಸ್ವಿಯಾಗಿ 81 ತಿಂಗಳು ಪೂರೈಸಿದೆ.

ದಿ. 07.01.2024 ರಂದು ಜಗನ್ನಾಥ ಭವನದ ಮಂಥನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀ ಸುದರ್ಶನ ಅವರ ನೇತೃತ್ವದಲ್ಲಿ ಕಲಾ ಸಂಗಮ ತಂಡದಿಂದ ಆಗಮಿಸಿದ ಕಲಾಸಕ್ತರ ಮೈ ಮನಸ್ಸನ್ನು ರೋಮಾಂಚನಗೊಳಿಸುವಲ್ಲಿ ಸಫಲವಾಯಿತು. ಭರತನಾಟ್ಯ, ಕಥಕ್, ವಿಶೇಷವಾಗಿ ಪ್ರಾಚೀನ ಸಮರಕಲೆಯಾಗಿದ್ದ ಕಲರಿಪಯಟ್ಟು ಇವುಗಳ ಪ್ರಸ್ತುತತೆಯ ಪ್ರಯತ್ನ ಸಾರ್ಥಕವಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ರಾಜ್ಯಸಭಾ ಸದಸ್ಯರಾದ ಶ್ರೀ ಲೆಹರ್‌ಸಿಂಗ್ ಸಿರೋಯಾ ಅವರು ಎಲ್ಲಾ ಕಲಾವಿದರ ಕಲೆಯಲ್ಲಿರುವ ತನ್ಮಯತೆಯನ್ನು ಹೊಗಳಿದರು. ಧ್ಯುತಿ ಎಂಬ ಎಂಬ 5 ವರ್ಷದ ಮಗು ಮಂಥನ ವೇದಿಕೆಯ ವಿಶೇಷ ಆಕರ್ಷಣೆಯಾಯಿತು. ಸಾಧನೆಗೆ ವಯಸ್ಸಿನ ಮಿತಿಯಿಲ್ಲ, ಸಾಧಿಸಬೇಕು ಎನ್ನುವ ಸಂಕಲ್ಪ, ಛಲವಿದ್ದರೆ ಅಸಾಧ್ಯವೂ ಸಾಧ್ಯ ಎಂಬುದರ ಪ್ರತ್ಯಕ್ಷ ನಿದರ್ಶನ ಕಣ್ಮುಂದೆ ಇತ್ತು.

ವಿಷ್ಣು ಸಹಸ್ರನಾಮ, ವೇದ, ಉಪನಿಷತ್, ಭಗವದ್ಗೀತೆ, ಹಾಗೂ ದೇವರ ನಾಮ ಇವುಗಳಲ್ಲಿಯ ಅವಳ ಸಾಧನೆಗೆ ಅವಳ ಹೆಸರು ‘ಇಂಡಿಯಾ ಬುಕ್ ಆಫ್ ರೆಕಾರ್ಡ್’ನಲ್ಲಿ ದಾಖಲಾಗಿದೆಯೆಂದು ತಿಳಿಯಿತು. ಅವಳ ಈ ಐದು ವರ್ಷದ ವಯಸ್ಸಿನಲ್ಲಿ ಎರಡು ಬಾರಿ ಬ್ರೈನ್ ಸರ್ಜರಿ, ಒಂದು ಬಾರಿ ಓಪನ್ ಹಾರ್ಟ್ ಸರ್ಜರಿ ಆಗಿದೆ ಎಂದು ತಿಳಿದಾಗ ನಮಗರಿವಿಲ್ಲದೇ ಕಣ್ಣುಗಳು ತೇವವಾದವು. ಕು. ಧ್ಯುತಿಯನ್ನು ಶ್ರೀ ಲೇಹರ ಸಿಂಗ್ ಸಿರೋಯಾ ಅವರು ಸನ್ಮಾನಿಸಿ ದೇವರು ಅವಳಿಗೆ ಇನ್ನೂ ಹೆಚ್ಚಿನ ಸಾಧನೆಗೆ ಆರೋಗ್ಯಭಾಗ್ಯ ನೀಡಲಿ, ನಮ್ಮಿಂದಾಗುವ ಸಹಕಾರವಿದೆ ಎಂದು ಹೇಳಿದರು.

ಕಲಾತಂಡದ ಪ್ರಮುಖರಾದ ಶ್ರೀ ಸುದರ್ಶನ ಅವರು ಕಲರಿಪಯಟ್ಟು ಕಲೆಯಲ್ಲಿ ಪರಿಣಿತರು. ಕಲರಿಪಯಟ್ಟು ಕಲೆಯನ್ನು ಒಲಂಪಿಕ್ ಕ್ರೀಡೆಯಲ್ಲಿ ಸೇರಿಸಬೇಕು ಎಂಬ ಬೇಡಿಕೆಯಿಟ್ಟು ನಮ್ಮ ನೆಚ್ಚಿನ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಗಮನಕ್ಕೆ ಈ ಕಲೆಯ ಮಹತ್ವವನ್ನು ತಿಳಿಸಿ ಮುಂದಿನ ಒಲಂಪಿಕ್ ಕ್ರೀಡೆಗಳಲ್ಲಿ ಕಲರಿಪಯಟ್ಟು ಸಮರ ಕಲೆಯ ಇರುವಂತೆ ಮಾಡಿದ್ದಾರೆ.

ಮಂಥನ ವೇದಿಕೆಯ ಮೇಲೆ ಇವರ ಕಲಾಪ್ರತಿಭೆ ಪ್ರಸ್ತುತ ಪಡಿಸುವ ಸಮಯದಲ್ಲಿ ಸಭಾಂಗಣದಲ್ಲಿದ್ದ ಪ್ರತಿಯೊಬ್ಬರೂ ತಾವು ಕುಳಿತ ಆಸನದ ಅಂಚಿಗೆ ಬಂದಿದ್ದರು. ಕಿಕ್ಕಿರಿದು ತುಂಬಿದ್ದ ಕಲಾಸಕ್ತರು ಒಂದು ಹೊಸ ಅನುಭವದೊಂದಿಗೆ ಇಂಥಹ ಕಾರ್ಯಕ್ರಮ ನೋಡಲು ಸಿಗುವುದು ಅಪರೂಪ. ಇದನ್ನು ಸಂಘಟಿಸಿದವರಿಗೆ ಧನ್ಯವಾದಗಳನ್ನು ತಿಳಿಸಲು ಮರೆಯಲಿಲ್ಲ.

ಎಲ್ಲಾ ಕಲಾವಿದರಿಗೆ ಈ ಜಗನ್ನಾಥ ಬಳಗದ ಸಂಚಾಲಕರಾದ ಶ್ರೀ ದತ್ತ ಗುರು ಹೆಗಡೆಯವರು ಅಭಿನಂದನಾ ಪತ್ರ ಕೊಟ್ಟು ಸನ್ಮಾನಿಸಿದರು.

# ಬಿಜೆಪಿಯ ನೂತನ ರಾಜ್ಯ ಪದಾಧಿಕಾರಿಗಳಿಗೆ ಅಭಿನಂದನೆಗಳು

## ಉಪಾಧ್ಯಕ್ಷರು


**ಶ್ರೀ ಮುರುಗೇಶ್ ನಿರಾಣಿ**
ಬಾಗಲಕೋಟೆ


**ಶ್ರೀ ಭೈರತಿ ಬಸವರಾಜ್**
ಬೆಂಗಳೂರು ಉತ್ತರ


**ಶ್ರೀ ನರಸಿಂಹ ನಾಯಕ್**
**(ರಾಜುಗೌಡ)**
ಯಾದಗಿರಿ


**ಶ್ರೀ ಎನ್. ಮಹೇಶ್**
ಚಾಮರಾಜನಗರ


**ಶ್ರೀ ಅನಿಲ್ ಬೆನಕೆ**
ಬೆಳಗಾವಿ


**ಶ್ರೀ ಹರತಾಳು ಹಾಲಪ್ಪ**
ಶಿವಮೊಗ್ಗ


**ಶ್ರೀಮತಿ ರೂಪಾಲಿ ನಾಯ್ಕ**
ಉತ್ತರಕನ್ನಡ


**ಡಾ. ಬಸವರಾಜ ಕೇಲಗಾರ**
ಹಾವೇರಿ


**ಶ್ರೀಮತಿ ಮಾಳವಿಕಾ ಅವಿನಾಶ್**
ಬೆಂಗಳೂರು ದಕ್ಷಿಣ


**ಶ್ರೀ ಎಂ. ರಾಜೇಂದ್ರ**
ಮೈಸೂರು

## ಪ್ರಧಾನ ಕಾರ್ಯದರ್ಶಿಗಳು


**ಶ್ರೀ ವಿ. ಸುನೀಲ್‌ಕುಮಾರ್**
ಉಡುಪಿ


**ಶ್ರೀ ಪಿ. ರಾಜೀವ್**
ಬೆಳಗಾವಿ


**ಶ್ರೀ ಎನ್.ಎಸ್. ನಂದೀಶ್ ರೆಡ್ಡಿ**
ಬೆಂಗಳೂರು ಉತ್ತರ


**ಶ್ರೀ ಜೆ. ಪ್ರೀತಮ್ ಗೌಡ**
ಹಾಸನ

## ಕೋಶಾಧ್ಯಕ್ಷರು



**ಶ್ರೀ ಸುಬ್ಬನರಸಿಂಹ**
**ಬೆಂಗಳೂರು ಕೇಂದ್ರ**

## ಕಾರ್ಯದರ್ಶಿಗಳು


**ಡಾ॥ ಶೈಲೇಂದ್ರ ಬೆಲ್ದಾಳೆ**
ಬೀದರ್


**ಶ್ರೀ ಡಿ.ಎಸ್. ಅರುಣ್**
ಶಿವಮೊಗ್ಗ


**ಶ್ರೀ ಬಸವರಾಜ ಮತ್ತೀಮೋಡ್**
ಕಲಬುರ್ಗಿ


**ಶ್ರೀ ಸಿ. ಮುನಿರಾಜು**
ಚಿಕ್ಕಬಳ್ಳಾಪುರ


**ಶ್ರೀ ವಿನಯ್ ಬಿದರೆ**
ತುಮಕೂರು


**ಕ್ಯಾಪ್ಟನ್ ಬ್ರಿಜೇಶ್ ಚೌಟ**
ದಕ್ಷಿಣಕನ್ನಡ


**ಶ್ರೀ ಶರಣು ತಳ್ಳಿಕೇರಿ**
ಕೊಪ್ಪಳ


**ಕು. ಲಲಿತಾ ಅನಾಪುರ**
ಯಾದಗಿರಿ


**ಡಾ. ಲಕ್ಷ್ಮೀ ಅಶ್ವಿನ್ ಗೌಡ**
ಮಂಡ್ಯ


**ಶ್ರೀಮತಿ ಅಂಬಿಕಾ ಹುಲಿನಾಯ್ಕರ್**
ತುಮಕೂರು

## ಮೋರ್ಚಾಗಳ ರಾಜ್ಯಾಧ್ಯಕ್ಷರು




**ಕು. ಸಿ. ಮಂಜುಳಾ**
ಶಿವಮೊಗ್ಗ
ಮಹಿಳಾ ಮೋರ್ಚಾ



**ಶ್ರೀ ಧೀರಜ್ ಮುನಿರಾಜು**
ಬೆಂಗಳೂರು ಗ್ರಾ.
ಯುವ ಮೋರ್ಚಾ



**ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ**
ವಿಜಯಪುರ
ರೈತ ಮೋರ್ಚಾ



**ಶ್ರೀ ರಘು ಕೌಟಿಲ್ಯ**
ಮೈಸೂರು
ಹಿಂದುಳಿದ ವರ್ಗಗಳ ಮೋರ್ಚಾ



**ಶ್ರೀ ಎಸ್. ಮಂಜುನಾಥ (ಸಿಮೆಂಟ್ ಮಂಜು)**
ಹಾಸನ
ಎಸ್.ಸಿ. ಮೋರ್ಚಾ




**ಶ್ರೀ ಬಂಗಾರು ಹನುಮಂತು**
ಬಳ್ಳಾರಿ
ಎಸ್.ಟಿ. ಮೋರ್ಚಾ



**ಶ್ರೀ ಅನೀಲ್ ಥಾಮಸ್**
ಮೈಸೂರು
ಅಲ್ಪಸಂಖ್ಯಾತ ಮೋರ್ಚಾ

# ಲಕ್ಷದ್ವೀಪದಲ್ಲಿ ಪ್ರಧಾನಿ ನರೇಂದ್ರ ಮೋದಿ

ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಲಕ್ಷದ್ವೀಪದ ಕಡಲತೀರಗಳಲ್ಲಿ ಮುಂಜಾನೆ ವಾಯುವಿಹಾರ ಆ ಕ್ಷಣಗಳನ್ನು 'ಶುದ್ಧ ಆನಂದ' ಎಂದು ಉಲ್ಲೇಖಿಸಿದ್ದಾರೆ. ಲಕ್ಷದ್ವೀಪದ ಪ್ರಶಾಂತತೆಯು 140 ಕೋಟಿ ಭಾರತೀಯರ ಕಲ್ಯಾಣಕ್ಕಾಗಿ ಇನ್ನೂ ಹೆಚ್ಚು ಶ್ರಮಿಸುವುದು ಹೇಗೆ' ಎಂದು ಪ್ರತಿಬಿಂಬಿಸಲು ನನಗೆ ಅವಕಾಶವನ್ನು ನೀಡಿದೆ ಎಂದು ಹೇಳಿದ್ದಾರೆ. ತಮ್ಮಲ್ಲಿರುವ ಸಾಹಸಗಳನ್ನು ಪ್ರದರ್ಶಿಸ ಬಯಸುವವರು ಲಕ್ಷದ್ವೀಪಕ್ಕೆ ಒಮ್ಮೆ ಭೇಟಿ ನೀಡಬೇಕೆಂದು ತಿಳಿಸಿದ್ದಾರೆ. ಲಕ್ಷದ್ವೀಪವು ಕೇವಲ ದ್ವೀಪಗಳ ಸಮೂಹವಾಗಿರದೆ ಅನಾದಿ ಕಾಲದ ಸಂಪ್ರದಾಯಗಳ ಪರಂಪರೆಯಾಗಿದೆ ಮತ್ತು ಅದರ ಜನರ ಮನೋಭಾವಕ್ಕೆ ಸಾಕ್ಷಿಯಾಗಿದೆ ಎಂದು ಅವರು ಹೇಳಿದ್ದಾರೆ.



ಲಕ್ಷದ್ವೀಪದಲ್ಲಿ ಜನಜೀವನವನ್ನು ಸುಧಾರಿಸಲು ಸರ್ಕಾರದ ಕ್ರಮಗಳನ್ನು ತಿಳಿಸಿದ ಪ್ರಧಾನಿ ಶ್ರೀ ಮೋದಿ, 1,150 ಕೋಟಿ ರೂ.ಗಿಂತ ಹೆಚ್ಚಿನ ಅಭಿವೃದ್ಧಿ ಯೋಜನೆಗಳ ಉದ್ಘಾಟನೆಯು ಬಗ್ಗೆ ಪ್ರಸ್ತಾಪಿಸಿದ್ದಾರೆ. 'ಈ ಯೋಜನೆಗಳು ಅಭಿವೃದ್ಧಿಯನ್ನು ಹೆಚ್ಚಿಸಲು, ಉತ್ತಮ ಆರೋಗ್ಯ, ವೇಗದ ಇಂಟರ್ನೆಟ್ ಮತ್ತು ಸುಧಾರಿತ ಕುಡಿಯುವ ನೀರಿನ ಸೌಲಭ್ಯಗಳನ್ನು ಜೊತೆಗೆ ರೋಮಾಂಚಕ ಸ್ಥಳೀಯ ಸಂಸ್ಕೃತಿಯನ್ನು ಸಂರಕ್ಷಿಸುವ ಮತ್ತು ಆಚರಿಸುವ ಒದಗಿಸುವ ಗುರಿಯನ್ನು ಹೊಂದಿವೆ ಎಂದು ಅವರು ಹೇಳಿದ್ದಾರೆ.

# ಗೋಕರ್ಣದ ಭೂಷಣ ಡಾ. ಎಸ್. ವಿ. ಜಠಾರ





ಗುರು ಪ್ರಸಾದ ಹೆಗಡೆ
ಜಿಲ್ಲಾ ಪ್ರಧಾನ ಕಾರ್ಯದರ್ಶಿ
ಬಿಜೆಪಿ - ಉತ್ತರ ಕನ್ನಡ

**1932** ಮೇ 29 ರಂದು ಗೋಕರ್ಣದ ಟೆಂಗ್ಸೆ ಕುಟುಂಬದಲ್ಲಿ ಭೂಷಣ ಅವರ ಜನನವಾಯಿತು. ತಂದೆ ಸೀತಾರಾಮ ಟೆಂಗ್ಸೆ ಅವರು ಸ್ವಾತಂತ್ರ್ಯ ಹೋರಾಟಗಾರರು. ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಭೂಷಣರು ಅಜ್ಜನಮನೆ ಚಿಕ್ಕಮಗಳೂರಿನ ಜಾವಳಿಯಲ್ಲಿ ಆರೇಳು ವರ್ಷಗಳನ್ನು ಕಳೆದರು. ತಮ್ಮ ಎಂಟನೇ ವಯಸ್ಸಿಗೆ ಪುನಃ ಗೋಕರ್ಣಕ್ಕೆ ಬಂದು ಜಠಾರ ಕುಟುಂಬಕ್ಕೆ ದತ್ತು ಮಗನಾಗಿ ಹೋದರು. ಗೋವುಗಳನ್ನು ಅಕ್ಕರೆಯಿಂದ ನೋಡಿಕೊಳ್ಳುವುದು ಭೂಷಣರ ತುಂಬಾ ಇಷ್ಟದ ಕೆಲಸದಲ್ಲಿ ಒಂದು. 1940 ರಲ್ಲಿ ಎಲ್ಲರೂ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುತ್ತಿದ್ದ ದಿನಗಳವು, ಗೋಕರ್ಣದಲ್ಲಿ ಪ್ರತಿ ನಿತ್ಯ ಪ್ರಭಾತ ಫೇರಿ ನಡೆಯುತ್ತಿತ್ತು.

ಒಂದು ದಿನ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಆಂದೋಲನ ನಡೆಯುವಾಗ ಪೊಲೀಸರು ಲಾಠಿಚಾರ್ಜ್ ಮಾಡಿ ಹೋರಾಟಗಾರರನ್ನು ಚದುರಿಸಿ, ಗಾಳಿಯಲ್ಲಿ ಗುಂಡು ಹಾರಿಸಿ, ಅನೇಕರನ್ನು ಬಂಧಿಸಿದರು. ಅದರಲ್ಲಿ ಭೂಷಣರು ಸಹ ಇದ್ದರು. ಬಾಲ್ಯದಿಂದಲೇ ರಾಷ್ಟ್ರಭಕ್ತಿ ಎಂಬುದು ಭೂಷಣ ಅವರಲ್ಲಿ ಬೇರೂರಿತು. ಕಲೆಯಲ್ಲಿ ಆಸಕ್ತಿ ಹೊಂದಿದ್ದ ಎಸ್.ವಿ. ಜಠಾರ ಅವರು, ಮಣ್ಣಿನ ಮೂರ್ತಿ ತಯಾರು ಮಾಡುವವರ ಜೊತೆಗೆ ಸೇರಿ ಗಣೇಶನ ಮೂರ್ತಿ ಮಾಡುವುದರಲ್ಲಿ ಸೈ ಎನಿಸಿಕೊಂಡರು. ಹಾಡುಗಾರಿಕೆ ಹವ್ಯಾಸವಾಯಿತು, ಸಂಗೀತ ಕಲಿತರು ಮುಂದೆ ಗೋಕರ್ಣದಲ್ಲಿ ಸಂಗೀತ ಶಾಲೆಯನ್ನೇ ಆರಂಭಿಸಿದರು. ನರಸಿಂಹ ಪಂಡಿತ ಎಂಬುವರಲ್ಲಿ ಶಾರೀರಿಕ ಶಿಕ್ಷಣ ಪಡೆದರು, ಮುಂಬಯಿಯ ಕೈವಲ್ಯಧಾಮದ ಸ್ವಾಮಿ ಕೋಲಯಾನಂದ ಅವರಲ್ಲಿ ಯೋಗಾಭ್ಯಾಸ ಮಾಡಿದರು. ಗೋಕರ್ಣದ ಕೋಟಿತೀರ್ಥದಲ್ಲಿ ಈಜು ಕಲಿತ ಭೂಷಣ ಜಠಾರರು, ಮುಂದೆ ನೂರಾರು ಜನರಿಗೆ ಸ್ವತಃ ಈಜು ಕಲಿಸಿದರು. ವೇದಾಧ್ಯಯನದ ಗಟ್ಟಿನೆಲ ಗೋಕರ್ಣ, ಭೂಷಣ ಜಠಾರರಿಗೆ ಪೌರೋಹಿತ್ಯ ವಂಶ ಪಾರಂಪರ್ಯವಾಗಿ ಬಂತು. ಜೊತೆಗೆ ಎಸ್ಎಸ್ಎಲ್ಸಿ ಖಾಸಗಿ ವಿಧ್ಯಾರ್ಥಿಯಾಗಿ ಕುಳಿತು ತೇರ್ಗಡೆ ಹೊಂದಿದರು. ಮುಂದೆ ನಾಲ್ಕು ವರ್ಷ ಹುಬ್ಬಳ್ಳಿಯ ಆಯುರ್ವೇದ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದು, ಕೆಲವರ್ಷ ಅಲ್ಲಿಯೇ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1952 ರಲ್ಲಿ ವಿಜಯಾ ಅವರೊಂದಿಗೆ ವಿವಾಹವಾಯಿತು. ಗೋಕರ್ಣಕ್ಕೆ ಮರಳಿ ವೆಂಕಟರಮಣ ದೇವಸ್ಥಾನದ ಅರ್ಚಕರಾಗುವುದರ ಜೊತೆಗೆ ವೈದ್ಯಕೀಯ ವೃತ್ತಿಯನ್ನು ಆರಂಭಿಸಿದರು. 1960–70 ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ.ಪೂ ಸರಸಂಘಚಾಲಕರಾದ ಗುರೂಜಿ ಅವರ ಮತ್ತು ಜನಸಂಘದ ನೇತಾರ ಮಾ. ಜಗನ್ನಾಥ ರಾವ್ ಜೋಷಿ ಅವರ ಸಂಪರ್ಕಕ್ಕೆ ಬಂದರು. ರಾಷ್ಟ್ರೀಯ ವಿಚಾರಗಳಿಂದ ಪ್ರಭಾವಿತರಾಗಿ ಸಂಘದ ನಿತ್ಯ ಶಾಖೆಯಲ್ಲಿ ತೊಡಗಿದರು. ಸಂಘಕಾರ್ಯವೆಂದರೆ ತೀರ ಕಠಿಣವಾಗಿದ್ದ ದಿನಗಳವು, ಶಾಖೆಗೆ ತೆರಳುವಾಗ ಭೂಷಣ ಜಠಾರರ ಮೇಲೆ ಬಿಸಿನೀರು ಎರಚಿದ್ದರಂತೆ, ಕೂದಲೆಳೆಯಲ್ಲಿ ಬಚಾವಾಗಿದ್ದರು. ಜನಾನುರಾಗಿ ವೈದ್ಯರಾಗಿ ಜನಸೇವೆಯಲ್ಲಿ ತೊಡಗಿದರು, ನಾಡಿ ಮಿಡಿತವನ್ನು ಪರೀಕ್ಷಿಸಿ ರೋಗಪತ್ತೆ ಮಾಡುವುದು ಸಿದ್ಧಿಸಿತ್ತು. ಯಾವುದೇ ಸ್ಕ್ಯಾನಿಂಗ್ ಯಂತ್ರ ಇಲ್ಲದ ಕಾಲವದು, ಗರ್ಭದಲ್ಲಿನ ಮಗುವಿನ ತಲೆ ತಿರುಗಿರದಿದ್ದರೆ ಜನನಕ್ಕೆ ತೊಂದರೆ ಆಗುವುದನ್ನು ಮುಂಚೆಯೇ ಪತ್ತೆಹಚ್ಚುವುದು ವಿಶೇಷವಾಗಿತ್ತು. ಅಲ್ಲದೆ ನಿತ್ಯ ಅಂತಹ ತಾಯಂದಿರ ಶುಶ್ರೂಷೆ ಮಾಡಿ ಹೆರಿಗೆ ಸಮರ್ಪಕವಾಗಿ ಆಗುವಂತೆ ಕಾಳಜಿ ವಹಿಸುತ್ತಿದ್ದರು. 1970 ರಲ್ಲಿ 16 ಎಕರೆ ಬೋಳುಗುಡ್ಡದ ಮೇಲೆ ತಮ್ಮದೇ ವಿಧಾನದಲ್ಲಿ ಕೃಷಿಯಲ್ಲಿ ತೊಡಗುವ ಮೂಲಕ ಹತ್ತಾರು ಔಷದೀಯ ಸಸ್ಯ, ಹಣ್ಣು ಹಂಪಲು ಗಿಡಗಳನ್ನು ನೆಟ್ಟು ಅಭಿವೃದ್ಧಿ ಪಡಿಸಿದರು. ಗೋಕರ್ಣದ ಸಹಕಾರಿ ಸಂಘವು ತೊಂದರೆಯಲ್ಲಿ ಇದ್ದದ್ದು ಡಾ. ಎಸ್.ವಿ. ಜಠಾರರ ಅರಿವಿಗೆ ಬಂದು ಅವರು ನೆರವಾದರು. ನಂತರ ಸಹಕಾರ ಸಂಘದ ನಿರ್ದೇಶಕರಾಗಿ, ಮುಂದೆ ಅಧ್ಯಕ್ಷರೂ ಆಗಿ ಸಂಸ್ಥೆಯನ್ನು ಮುನ್ನಡೆಸಿದರು. ಡಾ. ಜಠಾರರ ಪತ್ನಿ ವಿಜಯಮ್ಮ ರಾಷ್ಟ್ರ ಸೇವಿಕಾ ಸಮಿತಿಯ ಕಾರ್ಯಕರ್ತರಾಗಿ ಕೆಲಸ ಮಾಡಿದರು. 1971ರ ವಿಧಾನ ಸಭಾ ಚುನಾವಣೆಯಲ್ಲಿ ಅಂಕೋಲಾ ಕ್ಷೇತ್ರದಲ್ಲಿ ಜನಸಂಘದ ಅಭ್ಯರ್ಥಿಯಾಗಿ ಡಾ. ಎಸ್.ವಿ. ಜಠಾರ ಅವರು ಸ್ಪರ್ಧೆ ಮಾಡಿದರು. ಫಲಿತಾಂಶ ಸೋಲಾದರೂ ಠೇವಣಿ ಉಳಿಯಿತು. 70ರ ದಶಕದಲ್ಲಿ ಜನಸಂಘದ ದೀಪ ಹಚ್ಚಿದ ಗೋಕರ್ಣದ ಭೂಷಣ ಡಾಕ್ಟರ್ 2022 ಮಾರ್ಚ್ 27 ರಂದು ಇಹಲೋಕ ತ್ಯಜಿಸಿದರು.



# ‘ಮನ್ ಕಿ ಬಾತ್’ 108

# ಭಾರತ ಆತ್ಮಸ್ಥೈರ್ಯದ ಪ್ರತೀಕ

## 2024ರಲ್ಲೂ ಇದೇ ಉತ್ಸಾಹ, ಇದೇ ವೇಗವನ್ನು ಕಾಪಾಡಿಕೊಳ್ಳಬೇಕು

– ಪ್ರಧಾನಿ ನರೇಂದ್ರ ಮೋದಿ

‘ಮನ್ ಕಿ ಬಾತ್’ನ 2023ನೇ ಸಾಲಿನ ಕೊನೆಯ ಹಾಗೂ 108ನೇ ಸಂಚಿಕೆಯಲ್ಲಿ ಪ್ರಧಾನಿ ಮೋದಿ ಅವರು, ಭಾರತ **‘ನಾವೀನ್ಯತೆ ಕೇಂದ್ರ**,’ವಾಗುತ್ತಿದ್ದು, ಅದು ನಾವು ಎಲ್ಲಿಯೂ ನಿಲ್ಲದೆ ಮುಂದುವರಿಯಬೇಕು ಎಂಬುದನ್ನು ಸಂಕೇತಿಸುತ್ತದೆ ಎಂದು ಹೇಳಿದರು.

ಭಾಷಾ ನ್ಯೂನತೆಯಿಂದಾಗಿ ಶಾಲೆಯಿಂದ ಹೊರಗುಳಿದ, ಅಧ್ಯಯನವನ್ನು ಅರ್ಧಕ್ಕೇ ನಿಲ್ಲಿಸಿದ ಮಕ್ಕಳಿಗೆ ‘ರಾಷ್ಟ್ರೀಯ ಶಿಕ್ಷಣ ನೀತಿ’ಯು ಕಲಿಕೆಯಲ್ಲಿನ ಅಡೆತಡೆಗಳನ್ನು ನಿವಾರಿಸಲು ಹಾಗೂ ಮಗುವಿನ ಸಮಗ್ರ ಅಭಿವೃದ್ಧಿಗೆ ನೆರವಾಗಬೇಕೆಂಬುದು ಕೇಂದ್ರ ಸರಕಾರದ ಉದ್ದೇಶವಾಗಿದೆ ಎಂದು ಪ್ರಧಾನಿ ಶ್ರೀ ಮೋದಿ ತಿಳಿಸಿದರು. ಪೂರ್ವ ಪ್ರಾಥಮಿಕ ಹಂತದಿಂದ 12ನೇ ತರಗತಿವರೆಗಿನ ಎಲ್ಲಾ ಹಂತಗಳಲ್ಲಿಯೂ ‘ಸಮಗ್ರ ಶಿಕ್ಷಣ’ ಲಭ್ಯವಾಗುವಂತೆ ಹಾಗೂ ಎನ್‌ಇಪಿ ಅನ್ವಯ ಆರಂಭಿಕ ಬಾಲ್ಯಜೀವನದ ಆರೈಕೆ ಮತ್ತು 3ರಿಂದ 7 ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಶಿಕ್ಷಣ ಒದಗಿಸುತ್ತದೆ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು.

### ‘ಸಂಶೋಧನಾ ಕೇಂದ್ರ’ ಆಗುತ್ತಿರುವ ಭಾರತ!

ಭಾರತ ಹಂತ ಹಂತವಾಗಿ ‘ಸಂಶೋಧನಾ ಕೇಂದ್ರ’ವಾಗುತ್ತಿದೆ. 2015ರಲ್ಲಿ, ನಾವು ಜಾಗತಿಕ ಆವಿಷ್ಕಾರ ಸೂಚ್ಯಂಕದಲ್ಲಿ 81ನೇ ಸ್ಥಾನದಲ್ಲಿದ್ದೆವು. ಈಗ ದೇಶ 40ನೇ ಸ್ಥಾನಕ್ಕೇರಿದೆ. ಈ ವರ್ಷ ಸಲ್ಲಿಸಲಾದ ಪೇಟೆಂಟ್‌ಗಳ ಸಂಖ್ಯೆ ಅಧಿಕವಾಗಿದೆ. ಇದರಲ್ಲಿ ಶೇ.60ರಷ್ಟು ದೇಶೀ ನಿಧಿಗಳಿಂದಲೇ ಬಂದಿದೆ ಎಂದು ಪ್ರಧಾನಿ ಮೋದಿ ಹೇಳಿದರು. ‘ಮನ್ ಕಿ ಬಾತ್’ನಲ್ಲಿ ಈ ಬಾರಿ, ಇಶಾ ಪ್ರತಿಷ್ಠಾನದ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್, ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್, ಚದುರಂಗ ದಂತಕಥೆ ವಿಶ್ವನಾಥನ್ ಆನಂದ್, ಬಾಲಿವುಡ್ ನಟ ಅಕ್ಷಯ್ ಕುಮಾರ್ ತಮ್ಮ ಫಿಟ್ನೆಸ್ ಸಾಧನೆಯ ಸೂತ್ರಗಳನ್ನು ಪ್ರಧಾನಿ ಜತೆ ಹಂಚಿಕೊಂಡರು. ಅಯೋಧ್ಯೆಯ ರಾಮಮಂದಿರದ ಬಗ್ಗೆ ಇಡೀ ದೇಶವೇ ಉತ್ಸುಕವಾಗಿದೆ. ಇತ್ತೀಚಿನ ಕೆಲ ದಿನಗಳಲ್ಲಿ ಶ್ರೀರಾಮ ಮತ್ತು ಅಯೋಧ್ಯೆ ಕುರಿತು ಹೊಸ ಹಾಡು, ಕವಿತೆ, ಭಜನೆಗಳು ರಚನೆ ಆಗಿವೆ. ನಾನು ಕೆಲವು ಭಜನೆ ಮತ್ತು ಹಾಡುಗಳನ್ನು ಸಂದೇಶದಲ್ಲಿ ಹಂಚಿಕೊಂಡಿದ್ದೇನೆ. ಕಲಾ ಪ್ರಪಂಚ ವಿಶಿಷ್ಟ ಶೈಲಿಯಲ್ಲಿ ಐತಿಹಾಸಿಕ ಕ್ಷಣಗಳಲ್ಲಿ ಭಾಗಿಯಾಗುತ್ತಿದೆ ಎಂದು ಅವರು ಹೇಳಿದರು.

### ಮನ್ ಕಿ ಬಾತ್ ಪ್ರಮುಖಾಂಶ

- ಈ ವರ್ಷ ನಾವು ಅನೇಕ ಸಾಧನೆಗಳನ್ನು ಮಾಡಿದ್ದೇವೆ. ದೇಶ ವಿಶ್ವದ 5ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿದೆ. ಜಿ-20 ಯಶಸ್ವಿಯಾಗಿ ಆಯೋಜಿಸಲಾಗಿದೆ.
- ನಾಟು-ನಾಟು ಹಾಡು ಆಸ್ಕರ್ ಪ್ರಶಸ್ತಿ ಪಡೆದಾಗ, ‘ಎಲಿಫೆಂಟ್ ವಿಸ್ಪರರ್ಸ್’ ಪ್ರಶಸ್ತಿ ಗಳಿಸಿದಾಗ ಇಡೀ ದೇಶ ಸಂಭ್ರಮಿಸಿದೆ. ದೇಶದ ಮೂಲೆ ಮೂಲೆಯಲ್ಲೂ ಆತ್ಮವಿಶ್ವಾಸ ತುಂಬಿದೆ. ಮುಂದಿನ ವರ್ಷವೂ ಈ ಉತ್ಸಾಹವನ್ನು ಉಳಿಸಿಕೊಳ್ಳಬೇಕು.
- ಚಂದ್ರಯಾನ-3ರ ಯಶಸ್ಸಿಗಾಗಿ ಹಲವರು ಸಂದೇಶಗಳನ್ನು ಕಳುಹಿಸಿದ್ದಾರೆ. ಮಹಿಳಾ ವಿಜ್ಞಾನಿಗಳನ್ನು ವಿಶೇಷವಾಗಿ ಪ್ರಶಂಸಿಸಲಾಗುತ್ತಿದೆ. ಭಾರತವು ಇನ್ನೋವೇಷನ್ ಹಬ್ ಆಗುತ್ತಿರುವುದು ಎಂದೂ ನಾವು ನಿಲ್ಲುವುದಿಲ್ಲ ಎಂಬುದರ ಸಂಕೇತ.
- 2015ರಲ್ಲಿ ನಾವು ಗ್ಲೋಬಲ್ ಇನ್ನೋವೇಶನ್ ಇಂಡೆಕ್ಸ್‌ನಲ್ಲಿ 81ನೇ ಸ್ಥಾನದಲ್ಲಿದ್ದೆವು, ಈಗ 40ನೇ ಸ್ಥಾನಕ್ಕೇರಿದ್ದೇವೆ.
- ಕ್ರೀಡಾಪಟುಗಳು ಈ ವರ್ಷವೂ ಉತ್ತಮ ಪ್ರದರ್ಶನ ನೀಡಿದ್ದಾರೆ. ವಿಶ್ವಕಪ್ ಕ್ರಿಕೆಟ್‌ನಲ್ಲಿ ಆಟಗಾರರು ಅದ್ಭುತ ಪ್ರದರ್ಶನ ನೀಡಿದರು. ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಪ್ಯಾರಾ ಗೇಮ್ಸ್ ನಲ್ಲಿ ಪದಕ ಗೆದ್ದ ಕ್ರೀಡಾಪಟುಗಳ ಸಾಧನೆ ಅದ್ಭುತ. ಹಲವು ಕ್ರೀಡೆಗಳಲ್ಲಿ ಆಟಗಾರರ ಸಾಧನೆ ದೇಶದ ಘನತೆ ಹೆಚ್ಚಿಸಿದೆ.
- ಭಾರತ ಅಭಿವೃದ್ಧಿ ಹೊಂದಿದಾಗ ಯುವಜನತೆ ಅದರ ಲಾಭ ಪಡೆಯುತ್ತಾರೆ. ಆದರೆ ಯುವಕರು ದೈಹಿಕವಾಗಿ ಸಮರ್ಥವಾಗಿರುವುದು ಅಷ್ಟೇ ಮುಖ್ಯ. ನಿಯಮಿತ ವ್ಯಾಯಾಮ ಮತ್ತು 7 ಗಂಟೆಗಳ ಸಂಪೂರ್ಣ ನಿದ್ರೆ ದೇಹಕ್ಕೆ ಬಹಳ ಮುಖ್ಯ. ದೇಹದ ಆರೋಗ್ಯ ರಕ್ಷಣೆಗೆ ಇದು ಸಹಕಾರಿ.
- ಕಾಶಿ-ತಮಿಳು ಸಂಗಮದಲ್ಲಿ ಪಾಲ್ಗೊಳ್ಳಲು ತಮಿಳುನಾಡಿನಿಂದ ಸಾವಿರಾರು ಜನರು ಆಗಮಿಸಿದ್ದರು. ಅಲ್ಲಿ ಅವರೊಂದಿಗೆ ಸಂವಹನ ನಡೆಸಲು ‘ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಎಐ ಟೂಲ್ ಭಾಷಿಣಿ’ಯನ್ನು ಮೊದಲ ಬಾರಿಗೆ ಬಳಸಿದೆ. ನಾನು ಹಿಂದಿಯಲ್ಲಿ ಭಾಷಣ ಮಾಡುತ್ತಿದ್ದರೆ ಅದು ತಮಿಳಿಗೆ ಭಾಷಾಂತರವಾಗುತ್ತಿತ್ತು.

# ನಮ್ಮ ಸಂಕಲ್ಪ ವಿಕಸಿತ ಭಾರತ




ದಕ್ಷಿಣ ಕನ್ನಡ



ಹುಬ್ಬಳ್ಳಿ - ಧಾರವಾಡ



ಚಿಕ್ಕಬಳ್ಳಾಪುರ




ಯಾದಗಿರಿ




ಕಲಬುರ್ಗಿ




ವಿಜಯನಗರ




ಬೀದರ್



ಉತ್ತರ ಕನ್ನಡ



ಕಾಲೇ ವರ್ಷಂತು ಪರ್ಜನ್ಯಃ

# ನನಗೆ ನಾಯಕತ್ವದ ಮೇಲೆ ನಂಬಿಕೆ.. ನನ್ನ ಮೇಲೆ ನಾಯಕತ್ವಕ್ಕೆ ನಂಬಿಕೆ..!

'ನಂಬಿಕೆಯಲ್ಲಿ ಬಲವಿದೆ ಎಂಬುದನ್ನು ನೀನು ನಂಬಬೇಕು' ಹೌದು, ಈ ನಂಬಿಕೆ ಎನ್ನುವ ಪದ ಈಗಿನ ಕಾಲಘಟ್ಟದಲ್ಲಿ ನಂಬುವುದು ಸ್ವಲ್ಪ ಕಷ್ಟ. ಯಾರನ್ನು, ಯಾಕೆ, ಹೇಗೆ ನಂಬಬೇಕು ಎನ್ನುವುದು ಹಲವರ ಜಿಜ್ಞಾಸೆ ಆಗಿರುತ್ತದೆ. ಅದರಲ್ಲೂ ಒಂದು ಸಂಘಟನೆ ಅಥವಾ ರಾಜಕೀಯ ಪಕ್ಷಗಳ ನಾಯಕರನ್ನು ನಂಬುವುದಂತೂ ಕಷ್ಟ ಎನ್ನುವ ಮಾತು ಈ ಸಮಾಜದಲ್ಲಿ ಕೇಳಿ ಬರುತ್ತದೆ. ವ್ಯಕ್ತಿಯಾಗಲಿ, ಸಂಘಟನೆಯಾಗಲಿ ತನ್ನ ಸಿದ್ಧಾಂತಗಳಿಗೆ, ತನ್ನ ಬದ್ಧತೆಗಳಿಗೆ ಬದ್ಧರಾಗಿ ಕೆಲಸ ಮಾಡಿದಾಗ ಸಮಾಜಕ್ಕೆ ತನ್ನಿಂದ ತಾನೆ ನಂಬಿಕೆ ಮೂಡುತ್ತದೆ. ಆಗ ಆ ವ್ಯಕ್ತಿಗಾಗಲಿ ಅಥವಾ ಸಂಘಟನೆಗಾಗಲಿ ಈ ಸಮಾಜ ಎಂತಹ ತ್ಯಾಗಕ್ಕಾದರೂ ಸಿದ್ಧವಾಗುತ್ತದೆ. ಅದರಲ್ಲೂ ವ್ಯವಸ್ಥೆಯನ್ನು ಮುನ್ನಡೆಸುವ ನಾಯಕ ನಂಬಿಕಸ್ಥನಾಗಿರಬೇಕು. ಈ ಸಮಾಜಕ್ಕಾಗಿ ಆತ ಎಂತಹ ತ್ಯಾಗಕ್ಕೂ ಸಿದ್ಧನಾಗಿರಬೇಕು. ಆಗ ಈ ಸಮಾಜ ಸದಾ ಆತನ ಮೇಲಿನ ನಂಬಿಕೆಗೆ ತನ್ನನ್ನು ತಾನೆ ತ್ಯಾಗಕ್ಕೂ ಸಿದ್ಧವಾಗಿರುತ್ತಾರೆ.

ಇತಿಹಾಸದಲ್ಲಿ ಅನೇಕ ಉದಾಹರಣೆಗಳಿವೆ. ಅವುಗಳಲ್ಲಿ ಒಂದು, ಆತ ಮಹಾರಾಣಾ ಪ್ರತಾಪ್. ಪ್ರಸಿದ್ಧ ಹಿಂದೂ ದೊರೆ. ಮೊಘಲ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ವೀರ. ಆದರೆ ಮೋಘಲ್ ದೊರೆ ಅಕ್ಬರ್ ವಿರುದ್ಧದ ಹೋರಾಟದಲ್ಲಿ ಕುತಂತ್ರಗಳಿಂದ ಮಹಾರಾಣಾ ಪ್ರತಾಪ್ ಸೋಲನ್ನೊಪ್ಪಬೇಕಾಯಿತು. ಆಗ ಆತ ತನ್ನ ಜೀವ ಉಳಿಸಿಕೊಳ್ಳಲು ತಲೆಮರೆಸಿಕೊಳ್ಳಬೇಕಾಗುತ್ತದೆ. ತನ್ನೊಡನೆ ಇದ್ದ ತನ್ನ ಮಗು ಹಾಗೂ ತಾನು ಮೊಘಲರಿಗೆ ಸಿಕ್ಕಿ ಹಾಕಿಕೊಂಡರೂ ಸಾಮ್ರಾಜ್ಯದ ಭವಿಷ್ಯದ  ದೃಷ್ಟಿಯಿಂದ ತನ್ನ ಮಗನನ್ನು ಪೊನ್ನೂ ಎಂಬ ಕೆಲಸದಾಕೆ ಕೈಗೆ ಒಪ್ಪಿಸಿ, ಇವನನ್ನು ಕಾಪಾಡು,ಮುಂದೆ ನಮ್ಮ ಸಾಮ್ರಾಜ್ಯವನ್ನು ಇವನು ಕಾಪಾಡುತ್ತಾನೆ ಎಂದು ಹೇಳುತ್ತಾನೆ. ಆಕೆ ಅಯ್ಯೊ ಸಾಮಾನ್ಯಳಾದ ನಾನು ಹೇಗೆ ಕಾಪಾಡಲಿ ಸಾಧ್ಯವಿಲ್ಲ ಎನ್ನುತ್ತಾಳೆ. ಅದಕ್ಕೆ ಪ್ರತಾಪ್ ನಿನ್ನ ಕೈಯಲ್ಲಿ ಸಾಧ್ಯವಿದೆ ಎಂದು ಅಲ್ಲಿಂದ ತೆರಳುತ್ತಾನೆ. ಏಕೆಂದರೆ ಪ್ರತಾಪಸಿಂಹಗೆ ತನ್ನ ಸೇವಕಿಯ ಬಗ್ಗೆ ಇದ್ದ ನಂಬಿಕೆ.

ಪ್ರತಾಪಸಿಂಹನ ಮಗ ಸೇವಕಿಯ ಮನೆಯಲ್ಲಿರಬಹುದೆಂಬ ಗುಮಾನಿ ಹೇಗೋ ಅಕ್ಬರನ ಸೈನಿಕರಿಗೆ ತಲುಪುತ್ತದೆ. ಸೇವಕಿಯ ಮನೆಯ ಬಳಿಗೆ ಸೈನಿಕರು ಬರುತ್ತಾರೆ. ರಾಣಾ ಪ್ರತಾಪ್ ಮಗ ನಿನ್ನ ಬಳಿ ಇದ್ದಾನೆ, ತೋರಿಸು ಎನ್ನುತ್ತಾರೆ. ಅದಕ್ಕೆ ಅವಳು ನಿರಾಕರಿಸುತ್ತಾಳೆ.  ಮತ್ತೆ ಬೆದರಿಸಿದಾಗ ಆ ಮಹಿಳೆ ತನ್ನ ಮಗನನ್ನೇ ತೋರಿಸಿ ಅವನೇ ಪ್ರತಾಪಸಿಂಹನ  ಮಗ ಎಂದು ಬಿಡುತ್ತಾಳೆ. ಅವಳೆದುರಿಗೇ ಅಕ್ಬರನ ಸೈನಿಕರು ಅವಳ ಮಗನನ್ನು ಕೊಂದು ಬಿಡುತ್ತಾರೆ. ಕಣ್ಣೆದುರೇ ತನ್ನ ಮಗನು ಬಲಿಯಾಗುವ ಸಂದರ್ಭ ಬಂದರೂ ರಾಣಾ ಪ್ರತಾಪಸಿಂಹನ ನಂಬಿಕೆಯನ್ನು ಈ ಸೇವಕಿ ಹುಸಿಗೊಳಿಸಲಿಲ್ಲ. ತನ್ನ ಮಗನ ಮೇಲಿನ ವ್ಯಾಮೋಹಕ್ಕಿಂತ ತನ್ನ ರಾಜನು ತನ್ನ ಮೇಲೆ ಇಟ್ಟ ನಂಬಿಕೆ ಹಾಗೂ ತನ್ನ ದೇಶದ ಭವಿಷ್ಯ ಅವಳಿಗೆ ಮುಖ್ಯ ಎನಿಸಿಬಿಡುತ್ತದೆ.

ಇಲ್ಲಿ ಈ ತ್ಯಾಗಕ್ಕೆ ಕಾರಣವಾಗಿದ್ದು ನಂಬಿಕೆ. ಮೊದಲಿಗೆ ರಾಣಾಪ್ರತಾಪ್‌ನಿಗೆ ತನ್ನ ಮಗ ಈ ಮಹಿಳೆಯ ಮಡಿಲಿನಲ್ಲಿದ್ದರೆ ಸುರಕ್ಷಿತವಾಗಿ ಕಾಪಾಡುತ್ತಾಳೆ ಎಂಬ ನಂಬಿಕೆ. ಎರಡನೆಯದಾಗಿ ಆ ಮಹಿಳೆಗೆ ರಾಜ ವಂಶದ ಕುಡಿಯನ್ನು ಕಾಪಾಡಿದಲ್ಲಿ ಮುಂದೆ ರಾಜ್ಯ ಉಳಿಯುವುದು ಎಂಬ ನಂಬಿಕೆ. ಇದು ತನ್ನ ನಾಯಕತ್ವದ ಮೇಲೆ ನಂಬಿಕೆ. ನಾಯಕತ್ವದ ಮೇಲೆ ನಂಬಿಕೆಯಿದ್ದರೆ  ತನ್ನದೆಲ್ಲವನ್ನೂ ತ್ಯಾಗ ಮಾಡುವ ಪಡೆಯೂ ಇರುತ್ತದೆ. ಸಮಾಜಕ್ಕಾಗಿ ತನ್ನ ಗರ್ಭದ ಕುಡಿಯನ್ನೆ ತ್ಯಾಗ ಮಾಡಿದ ತಾಯಿ ಸ್ಮರಣೀಯಳು ಹಾಗೂ ಪ್ರೇರಣೀಯಳು.

ವೈಚಾರಿಕ ಹಾಗೂ ರಾಜಕೀಯ ಸಂಘಟನೆಗಳಲ್ಲಿರುವ ನಮಗೆ ಇದು ಅತ್ಯುತ್ತಮ ಉದಾಹರಣೆ. ಸಂಘಟನೆಯ ನಾಯಕತ್ವದ ಮೇಲೆ ನಮಗೆ ನಂಬಿಕೆ ಇರಬೇಕು. ಸಂಘಟನೆಯ ನಾಯಕರಿಗೆ ನಮ್ಮ ಮೇಲೆ ನಂಬಿಕೆಯಿರುವಂತಹ ನಡೆ ನಮ್ಮದಾಗಿರಬೇಕು. ಆಗ ಮಾತ್ರ ಸಂಘಟನೆಯ ಸಿದ್ಧಾಂತ, ಬದ್ಧತೆ ಇನ್ನೂ ಗಟ್ಟಿಯಾಗುತ್ತದೆ ಹಾಗೂ ಚಿರಕಾಲ ಉಳಿಯುತ್ತದೆ. ಹೇಗೆ ಈ ದೇಶದ ಈಗಿನ ನಾಯಕತ್ವದ ಮೇಲೆ, ದೇಶದ ಜನರ ಮೇಲೆ ಅಪಾರವಾದ ನಂಬಿಕೆ ಇಟ್ಟ ಪರಿಣಾಮ, ದೇಶದ ಜನ ಎಂತಹ ತ್ಯಾಗಕ್ಕೂ ಸಿದ್ಧರಿದ್ದಾರೆ, ಜೊತೆಗೆ ಬದ್ಧರಿದ್ದಾರೆ.

**ನಂಬಿಕೆ ಮತ್ತು ತ್ಯಾಗ ಈ ಸಮಾಜಕ್ಕೆ ತುಂಬಾ ಒಳ್ಳೆಯದು ಆದರೆ ನಂಬಿಕೆಯ ದ್ರೋಹ ಆಗಬಾರದು ಅಷ್ಟೆ.**

**– ಸ್ವಯಂಭೂ**

**KAMALA PATHA** Monthly in Kannada
Date of Publication : 8th of Every Month
Price : ₹ 10/-    Pages : 36

RNI No.:KARKAN/2023/84034  REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026  DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**